ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಮಾಜೀ ಮುಖ್ಯಮಂತ್ರಿಗಳಾಗಿದ್ದಂಥ ಶ್ರೀಮಾನ್ ಬಂಗಾರಪ್ಪನವರಿಗೆ ನಿಯಮೂವಳಿಗಳು ಗೊತ್ತಿದೆ. ಅವರೇನೂ ಹೊಸಬರಲ್ಲ. ನನ್ನ ಅಭಿಪ್ರಾಯ ಏನೆಂದರೆ, ಯಾವುದಾದರೂ ಒಂದು ಸಂದರ್ಭದಲ್ಲ, ಅತ್ಯಂತ ಪ್ರಮುಖವಾಗಿರುವಂತಹ ವಿಷಯ...

ಅಧ್ಯಕ್ಷರು : ಅದಕ್ಕಾಗಿಯೇ ಚರ್ಚೆ ಬೇಡ, ನಾನು ಒಪ್ಪಿಕೊಂಡಿದ್ದೇನೆ. ನೀವು ಪ್ರಸ್ತಾಪವನ್ನು ಮಂಡಿಸಬಹುದು.

ಪ್ರಸ್ತಾವ ಮಂಡನೆ

ಶ್ರೀ ಬಿ.ಎಸ್. ಯಡಿಯೂರಪ್ಪ : ಹಾಗಾದರೆ ನಾನು ಈ ಕೆಳಕಂಡ ಪ್ರಸ್ತಪವನ್ನು ಮಂಡಿಸುತ್ತೇನೆ.

"ಈ ಸದನ ಶ್ರೀ ಎಚ್. ಡಿ. ದೇವೇಗೌಡ ಅವರ ನೇತೃತ್ವ ಮಂತ್ರಿ ಮಂಡಲದಲ್ಲಿ ಅವಿಶ್ವಾಸನ್ನು ವ್ಯಕ್ತಪಡಿಸುತ್ತದೆ "

ಈ ಪ್ರಸ್ತಾಪವನ್ನು ನಾನು ತಮ್ಮ ಮುಂದೆ ಕಳಿಸಿಕೊಟ್ಟಿದ್ದೇನೆ. ಅದನ್ನು ತಾವು ತೆಗೆದುಕೊಳ್ಳಬೇಕೆಂದು ಈ ಸಂರ್ಭದಲ್ಲಿ ಹೇಳಿ,

ಅನುಮೋದನೆಗೆ ತಾವು ಅವಕಾಶ ಮಾಡಿಕೊಡಬೇಕೆಂದು ಪ್ರಾರ್ಥನೆ

ಮಾಡಿಕೊಡಬೇಕು. 167ನೇ ರೂಲ್ಸಿ ಪ್ರಕಾರ ತಾವು ಅವಕಾಶ ಮಾಡಿಕೊಡಸಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು : ಪ್ರಸ್ತಾಪ ಮಂಡಿಸಿದ್ದಾಯಿತು.

ಶ್ರೀ ವೈ. ರಾಮಕೃಷ್ಣ : ನಾನು ಅನುಮೋದಿಸುತ್ತದೆ.

(ಗೊಂದಲ)

ಅಧ್ಯಕ್ಷರು : ನಿಯಮಾವಳಿಗಳ ಪ್ರಕಾರ ಅಗತ್ಯ ಸಂಖ್ಯೆಯ ಸದಸ್ಯರು ಈ ನಿರ್ಣಯಕ್ಕೆ ಸಮ್ಮತಿಸಿರುವುದರಿಂದ ಮುಂದಿನ ಹಂತಕ್ಕೆ ಹೋಗೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸನ್ಮಾನ್ಯ ಅಧ್ಯಕ್ಷರೆ, ಇದರ ಮೇಲೆ ತಾವು ಹೇಳುತ್ತೀರೇ.

ಶ್ರೀ ಎಚ್.ಡಿ. ದೇವೇಗೌಡ : ಇದರ ಬಗ್ಗೆ ಪ್ರಸ್ತಾಪ ಮಾಡೋಣ. ಮಾನ್ಯ ಅಧ್ಯಕ್ಷರೇ ಅನುಮತಿ ಪಡೆದು ಹೇಳುತ್ತೇನೆ. ನನಗೆ ಗೊತ್ತಿರುರ ಪ್ರಕಾರ ಎರಡು ವಿಧಾನ ಇವೆ. ಸಭೆಯಲ್ಲಿ ಅವಿಶ್ವಾಸ ನಿರ್ಣಯ ಮಂಡನೆ ಆಗಿ ಅದಕ್ಕೆಕ ನಿಯಮದ ಪ್ರಕಾರ ಎಷ್ಟು ಜನರ ಬೆಂಬಲ ಬೇಕೋ ಅಷ್ಟು ಬೆಂಬಲ ಸಿಕ್ಕಿದ ಮೇಲೆ ತಾವು ಸಬೆಯಲ್ಲಿ ಅನುಮತಿ ಕೊಡಬೇಕು, ಅದು ಮೊದಲನೆಯದು. ಅನುಮತಿ ಕೊಟ್ಟ ಮೇಲೆ ಎಷ್ಟು ದಿನ ಚರ್ಚೆ ಆಗಬೇಕು? ಯಾವಾಗ ಚರ್ಚೆ ಆಗಬೇಕು? ನಿರ್ಣಯ ಮಾಡತಕ್ಕದ್ದು. ಒಂದು ತಾವು ಎಲ್ಲರನ್ನೂ ತಮ್ಮ ಕೊಠಡಿಗೆ ಕರೆಯಿಸಿ ನಿರ್ಣಯ ಮಾಡುವುದು ಒಂದು ಭಾಗ, ಇನ್ನೊಂದು ಸಭೆಯಲ್ಲಿಯೇ ನಿರ್ಣಯ ತೆಗೆದುಕೊಳ್ಳತಕ್ಕದ್ದು ಭಾಗ. ನನಗೂ ಗೊತ್ತಿರುವಂತೆ ಅನೇಕ ಸಂದರ್ಭದಲ್ಲಿ ಅವಿಶ್ವಾಸ ನಿರ್ಣಯ ಮಂಡನೆ ಮಾಡಿದ ಮೇಲೆ ಅದು ತೀರ್ಮಾನ ಆಗುವವರೆಗೆ ಸಭೆಯಲ್ಲಿ ನಾವು ಬೇರೆ ಕಾರ್ಯಕ್ರಮವನ್ನು ಮುಂದುವರಿಸತಕ್ಕದ್ದು ನೈತಿಕ ಹಕ್ಕು ನಮಗೆ ಇರುವುದಿಲ್ಲ. ಆದ್ದರಿಂದ ಈ ಚರ್ಚೆ ಈಗಲೇ ಪ್ರಾರಂಭವಾಗಲಿಕ್ಕೆ ತಾವು ಅನುಮತಿ ಕೊಡಬೇಕು, ಸಭೆ ಅನುಮತಿ ಕೊಡಬೇಕು ಎಂದು ನಾನು ಕೇಳಿಕೊಳ್ಳುತ್ತಿದ್ದೇನೆ.

ಅಧ್ಯಕ್ಷರು : ತಾವು ತಯಾರಾಗಿದ್ದೀರಾ?

ಶ್ರೀ ಬಿ.ಎಸ್. ಯಡಿಯೂರಪ್ಪ : ನಾವು ತಯಾರಾಗಿದ್ದೇವೆ, ಇಲ್ಲಿ ತಮ್ಮ ತೀರ್ಮಾನಕ್ಕೆ ಬಿಟ್ಟಿರತಕ್ಕದ್ದು. ಇಲ್ಲಿರುವಂತಹದ್ದು ಅಗತ್ಯ ಇರುವಂತಹ ಸಂಗತಿ ಇದೆ. ಇದನ್ನು ಮಂಡನೆ ಮಾಡುವುದಕ್ಕೆ ಹೌಸ್‌ಪರ್ಮಿಷನ್ ಸಿಕ್ಕಿದೆ, ಮಾನ್ಯ ಸಭಾ ನಾಯಕರು ಒಪ್ಪಿಕೊಂಡಿದ್ದಾರೆ. ತಾವು ಅದನ್ನು ತೀರ್ಮಾನ ಮಾಡಿದ್ದೀರಿ. ಪ್ರಸ್ತಾಪವು ಕ್ರಮವಾಗಿದೆ ಎಂದು ಅಧ್ಯಾಕ್ಷರು ಅಭಿಪ್ರಾಯ ಪಟ್ಟರೆ ಅವರು ಆ ಪ್ರಸ್ತಾಪವನ್ನು ಸಭೆಯಲ್ಲಿ ಓದಬೇಕು. ಇದಾದ ಮೇಲೆ ನಾನು ಹೇಳುತ್ತಿರುವುದು ಏನೆಂದರೆ ಅಧ್ಯಕ್ಷರು ತೀರ್ಮಾನಿಸಿದ ಪ್ರಕಾರ ಆ ತರುವಾಯ ಮೂರು ದಿನಗೊಳಗೆ ಯಾವುದಾದರು ಒಂದು ದಿನ ಚರ್ಚೆಗೆ ತೆಗೆದುಕೊಳ್ಳುವುದನ್ನು ತಿಳಿಸತಕ್ಕದ್ದು ಆ ಒಂದು ಡೇಟನ್ನು ತಾವು ಫಿಕ್ಸ್‌ಮಾಡಬಹುದು. ಅದಕ್ಕೋಸ್ಕರ ತಾವು ಬಿಸಿನೆಸ್ ಅಡ್ವೈಸರಿ ಕಮಿಟಿಯು ಏನು ಇದೆ ಅದನ್ನು ಕರೆದು ಎಷ್ಟು ದಿವಸ ಮಾಡಬೇಕು. ಏನು ಮಾಡಬೇಕು? ನಿಯಮವನ್ನು ನಿಶ್ಚಯ ಮಾಡಿಸುವುದಕ್ಕೋಸ್ಕರ ಕರೆಸುತ್ತೀರೋ? ಅಥರಾ ಹಾಗೆಯೇ ಮಾಡುತ್ತೀರೋ?

(ಗೊಂದಲ)

ಶ್ರೀ ಎನ್. ರಾಜಣ್ಣ ತಾವು ರೂಲಿಂಗ್‌ಕೊಟ್ಟಿದ್ದೀರಿ, ಚರ್ಚೆಗೆ ತೆಗೆದುಕೊಳ್ಳಲಿ

(ಗೊಂದಲ)

ಅಧ್ಯಕ್ಷರು : ಮಾನ್ಯ ಜೋಶಿ ಅವರೇ ಕುಳಿತಿಕೊಳ್ಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ-ಪಕ್ಷದ ನಾಯಕರು ಓಟ್ ಆಫ್ ನೋ ಕಾನ್‌ಫಿಡೆನ್ಸ್ ಮೊಷನ್‌ಅನ್ನು ಮಂಡಿಸಿದಾಗ ತಾವು ಹೇಳಿದಿರಿ ಅದಕ್ಕೆ ಪ್ರಾಮುಖ್ಯತೆ ಕೊಡಬೇಕಾಗಿದೆ ಎಂದು, ಅದಕ್ಕಾಗಿ ಅದನ್ನು ಮೊದಲು ತೆಗೆದು ಕೊಂಡು ಆಮೇಲೆ ನಾವು ರೂಲ್ಸ್ 67ರ ಕೆಳಗೆ ಕೊಟ್ಟಂತಹ ವಿಚಾರವನ್ನು ಚರ್ಚೆಗೆ ತೆಗೆದುಕೊಳ್ಳಬಹುದು ಅಲ್ಲಿಯವರೆಗೆ ತಾವು ಸ್ವಲ್ಪ ಕಾದು ನೋಡಿ ಎಂದು ಹೇಳಿದಿರಿ. ತಮ್ಮ ಹೇಳಿಕೆ ಪ್ರಕಾರ ನಾವು ಇವತ್ತು ಕುಳಿತಿದ್ದೇವೆ, ತಮಗೆ ಗೊತ್ತಿದೆ ಮತ್ತು ಮಾನ್ಯ ಎಲ್ಲಾ ಸದಸ್ಯರಿಗೂ ಗೊತ್ತಿದೆ. ಈ ಸದನ ಯಾವ ಸಂದರ್ಭದಲ್ಲಿ ಸೇರಿತು ಮತ್ತು ಇದಕ್ಕೆ ಕಾರಣಗಳು ಏನು ಎನ್ನತಕ್ಕದ್ದು ಕೂಡ ತಮಗೆ ಗೊತ್ತಿದೆ. ನಾವೆಲ್ಲಾ ಸದಸ್ಯರೂ ಒತ್ತಾಯ ಮಾಡಿ ರಾಜ್ಯ ಪಾಲರಿಗೆ ಒಂದು ಮನವಿ ಕೊಟ್ಟು ಅವರೂ ಕೂಡ ಅಂದರೆ ಬಿ.ಜೆ.ಪಿ. ಅವರೂ ಕೂಡ ಅವರ ಪರವಾಗಿ ಒತ್ತಾಯ ಮಾಡಿದ್ದರು.ನಾವೆಲ್ಲರೂ ಕೂಡ ಒತ್ತಾಯ ಮಾಡಿ ರಾಜ್ಯದಲ್ಲಿರತಕ್ಕಂಥ ಬರಗಾಲ ಪರಿಸ್ಥಿತಿ ಬಗ್ಗೆ ಮತ್ತು ಬರಗಾಲ ಪರಿಸ್ಥಿತಿಯಲ್ಲಿ ಸರ್ಕಾರದವರು ಇವತ್ತಿನ ದಿವಸ ರಿಲೀಫ್ ಕೊಟ್ಟಿದ್ದಾರೋ ಅಥವಾ ಕೊಟ್ಟಲ್ಲವೋ ? ಎಷ್ಟರಮಟ್ಟಿಗೆ ಕೆಲಸ ಮಾಡಿದ್ದಾರೆ ಅಥವಾ ಮಾಡಿಲ್ಲ ಎನ್ನುವುದರ ಬಗ್ಗೆ ಚರ್ಚೆಗೆ ತೆಗೆದುಕೊಳ್ಳಬೇಕು. ಮತ್ತೆ ಅದಕ್ಕಾಗಿಯೇ ಸದನವನ್ನು ಕರೆಯಿಸಬೇಕು ಎನ್ನತಕ್ಕದ್ದನ್ನು ನಾವೆಲ್ಲರೂ ಒತ್ತಾಯ ಮಾಡಿದ್ದೇವೆ. ಆಮೇಲೆ ಮುಖ್ಯಮಂತ್ರಿಗಳ ಕೂಡ ಸಭೆಯನ್ನು ಕರೆದರು, ಸಭೆಯನ್ನು ಕರೆದು ಅಲ್ಲಿ ಚರ್ಚೆ ಮಾಡಿದರು. ಚರ್ಚೆ ಮಾಡಿ ನಾನು ಆಗಸ್ಟ್ 1ಕ್ಕೆ ಸದನವನ್ನು ಕರೆಸುತ್ತೇನೆಂದು ಕಮಿಟಿಯಲ್ಲಿ ಹೇಳಿದರು . ಹೇಳಿದ ಮೇಲೆ ಪುನಃ ಅವರಿಗೆ ಏನು ಅನಿಸಿತೋ ಗೊತ್ತಿಲ್ಲ, ಏಳನೇ ತಾರೀಖು ಎಂದು ಹೇಳಿ ಇವತ್ತು ಸದನವನ್ನು ಕರೆದರು ಅವವ ಮಾತಿನ ಪ್ರಕಾರ ಮತ್ತು ಸಮಿತಿಯಲ್ಲಿ ನಾವೇನು ಸದಸ್ಯರು ಆಗ ಇದ್ದೇವೆ ಮಾನ್ಯ ವಿರೋಧ ಪಕ್ಷದ

ನಾಯಕರು ಇದ್ದರು, ಮಾನ್ ನಂಜೇಗೌಡರು ಇದ್ದರು, ಶ್ರೀ ವೀರಪ್ಪಮೊಯಿಲಿ ಅವರು ಇದ್ದರು ಮತ್ತು ಕೆಸಿಪಿ ಪರವಾಗಿ ಮಾನ್ಯ ಸುದರ್ಶನ್ ಅವರು ಇದ್ದರು, ವಾಟಾಳ್‌ನಾಗರಾಜ್ ಅವರು ಇದ್ದರು, ಖಮರುಲ್ ಇಸ್ಲಾಂ ಅವರು ಇದ್ದರು. ಎಲ್ಲಾ ಪಕ್ಷದ ಎಲ್ಲಾ ಸದಸ್ಯರೂ ಕೂಡ ಇದ್ದರು. ಶ್ರೀ ರಾಮಚಂದ್ರ ರೆಡ್ಡಿ ಮತ್ತು ನಮ್ಮ ಆರ್‌ಪಿಐ ಮುಖಂಡರು ಶ್ರೀ ಮುನಿಯರ್ಡನವರೂ ಇದ್ದರು, ಎಲ್ಲರ ಸಮ್ಮುಕದಲ್ಲಿಯೇ ಮೊದಲನೆ ತಾರೀಖು ಸದಸನವನ್ನು ನಾನು ಕರೆಸುತ್ತೇನೆ. ಮತ್ತು ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆ ಎನ್ನತಕ್ಕ ಮಾತನ್ನು ಅವರು ಸ್ಪಷ್ಟವಾಗಿ ಹೇಳಿದ್ದರು.

ಆದರೆ ಪುನಃ ಇದನ್ನು ಏಳು ದಿವಸ ಮುಂದಕ್ಕೆ ಹಾಕಿದರು. ಯಾವ ಕಾರಣಕ್ಕಾಗಿ ಮುಂದಕ್ಕೆ ಹಾಕಿದರೋ ನನಗೆ ಗೊತ್ತಾಗಲಿಲ್ಲ. ಅದಕ್ಕೋಸ್ಕರ ಯಾವ ಒಂದು ವಿಷಯ ಬಹಳ ಪ್ರಾಮುಖ್ಯತೆ ಇದೆಯೋ, ಈ ಒಂದು ಸಮಸ್ಯೆ ಮೇಲೆ ಏನು ಚರ್ಚೆಯಾಗುತ್ತದೆ? ಮತ್ತು ಇದರ ಬಗ್ಗೆ ಸರ್ಕಾರ ಏನು ಪರಹಾರ ಕೊಡುತ್ತದೆ? ಅಥರಾ ಸರ್ಕಾರ ಇವೋತ್ತಿನ ದಿವಸ ಎಷ್ಟು ಹಣ ಬಿಡುಗಡೆ ಮಾಡುತ್ತದೆ ? ಏನು ಕೆಲಸ ಕೊಡುತ್ತಿದೆ ? ಎನ್ನುವುದರ ಬಗ್ಗೆ ಇಡೀ ರಾಜ್ಯದ ಜನರು ಎದುರು ನೋಡುತ್ತಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅಧ್ಯಕ್ಷರೆ. ತಾವು ಅವರಿಗೆ ಅವಕಾಶ ಕೊಟ್ಟಿರುವುದು ಪಾಯಿಂಟ್‌ಆಫ್ ಆರ್ಡರ್‌ಗೆ ತಾನೆ? ನಾನು ನನ್ನ ಮಾತುಗಳನ್ನು ಇನ್ನೂ ಪೂರ್ತಿಗೊಳಿಸಿಲ್ಲ.

ಅಧ್ಯಕ್ಷರು : ನಿಯಮಾವಳಿಗಳನ್ನು ನಾನು ಯಾವುದೇ ಸಂದರ್ಭದಲ್ಲೂ ಕೈಬಿಡುವುದಿಲ್ಲ. ಅದನ್ನು ಗೌರವಿಸುತ್ತೇನೆ. ಪಾಯಿಂಟ್‌ಆಫ್‌ಆರ್ಡರ್ ಹೀಗೆ ಹೇಳಬೇಕು? ಇಷ್ಟೊತ್ತಿಗೆ ಹೇಳಬೇಕೆಂದಲ್ಲ. He is trying to raise a point of Order .ಅದರಲ್ಲಿ ಬಂಡವಾಳ ಇದೆಯೋ? ಇಲ್ಲವೋ ಎಂದು ಹೇಳುವ ಅಧಿಕಾರ ನನ್ನಲ್ಲಿರುವುದರಿಂದ ಅದನ್ನು ಸದ್ವಿನಿಯೋಗ ಮಾಡುತ್ತೇನೆ. ತಾವು ಸಂಕ್ಷಿಪ್ತರಾಗಿ ಹೇಳಿ ಮುಗಿಸಬೇಕು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ : ಈ ಒಂದಿ ವಿಶೇಷರಾದ ಸಂದರ್ಭದಲ್ಲಿ ನಾವು ರಾಜ್ಯಪಾಲರಿಗೆ ಕೊಟ್ಟಂಥ ಮನವಿ, ತದನಂತರ ಮುಖ್ಯಮಂತ್ರಿಯವರು ಸಭೆ ಕರೆದು ತೆಗೆದು ಕೊಂಡ ತೀರ್ಮಾನದ ಪ್ರಕಾರ ಇವೊತ್ತು ಸದಸವನ್ನು ಕರೆದಿದ್ದಾರೆ. ಸದನ ಕರೆದಾಗ ಇವೊತ್ತು ನಿಜವಾಗಲೂ ಕಾರ್ಯಕಲಾಪಗಳ ಪಟ್ಟಿಯಲ್ಲಿ ಸೇರಿಲ್ಲ. ಹಾಗೆಯೇ ಸದನದ ಕಾರ್ಯಕಲಾಪಗಳ ಸಲಾಹ ಸಮಿತಿ ಸಭೆ ಸಹ ಸೇರದೆ ಈ ವಿಶಷಕ್ಕೆ ಆದ್ಯತೆ ಸಿಗಲಿಲ್ಲ. ಆದರೂ ಸಹ ನಿಯಮ 60ರ ಕೆಳಗೆ ನಾವು ನಿಲುವಳಿ ಸೂಚನೆಯನ್ನು ಮಂಡಿಸಿರುವುದರಿಂದ ಇವೊತ್ತಿನ ದಿವಸ ಅದಕ್ಕೆ ಆದ್ಯತೆ ಸಿಗಬೇಕಾಗಿತ್ತು ಆದರೆ ಅವಿಶ್ವಾಸ ನಿರ್ಣಯವನ್ನು ಅವರು ಏನು ಮಂಡಿಸುತ್ತಾರೆ. ಅದನ್ನು ತಾವು ಕೇಳಬೇಕು ಎಂದಾಗ ನಾವು • ಕೇಳಿಕೊಂಡು ಕುಳಿತಿದ್ದೇವೆ, ಒಂದು ವೇಳೆ ಇದನ್ನು 2-3 ದಿವಸಗಳಿಗೆ ಮುಂದೂಡಿ ಕೊಂಡು ಹೋಗಿ ಇದನ್ನು ಈಗ ಬೇಕಾದರೂ ತೆಗೆದುಕೊಳ್ಳಿ. ಅವಿಶ್ವಾಸ ನಿರ್ಣಯ ಮಂಡಿಸಿದ ನಂತರವಾದರೂ ತೆಗೆದುಕೊಳ್ಳಿ. ಈಗ ತಕ್ಷಣ ಇದನ್ನು ತೆಗೆದುಕೊಳ್ಳಿ. ಬರಗಾಲದ ಪರಿಸ್ಥಿತಿ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂಬ ಅಂಶವನ್ನು \ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಏಕೆಂದರೆ, ಈ ಸಭೆಯನ್ನು ಕರೆದಿರುವುದು ಅದಕ್ಕಾಗಿ. ಈ ರಾಜ್ಯದ ಜನತೆಗೆ ಗೌರವ ಕೊಡುವ ದೃಷ್ಟಿಯಿಂದಲಾದರು ಈ ಸಂದರ್ಭದಲ್ಲಿ ಮೊದಲ ಈ ವಿಷಯವನ್ನು ಆದ್ಯತೆ ಮೇಲೆ ತೆಗೆದುಕೊಳ್ಳಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ವಾಟಾಳ್‌ನಾಗರಾಜ್ : ಮಾನ್ಯ ಅಧ್ಯಕ್ಷರೆ, ತಾವು ಸದನ ಕಾಹ್ಯಕಲಾಪಗಳ ಸಲಹಾ ಸಮಿತಿ ಸಭೆ ಕರೆದು ಮುಂದೂಡಿದ್ದೀರಿ, ಇದಕ್ಕೆ ಕಾರಣವೇನೆಂದು ಗೊತ್ತಾಗಲಿಲ್ಲ.

ಭಾನುವಾರ ಬೆಳಗೆ 9.00 ಗಂಟೆಗೆ ಸಭೆಯನ್ನು ಕರೆದಿದ್ದಿರಿ ಎಂದು ನಾವೆಲ್ಲ ಸಭೆಗೆ ತಯಾರಾಗಿ ಬಂದರೆ ಮುಂದೂಡಿದ್ದೀರಿ, ಇದರ ಉದ್ದೇಶವೇನು? ಎಷ್ಟು ದಿವಸ ಬರಗಾಲ ಪರಿಸ್ಥಿತಿ ಬಗ್ಗೆ ಚರ್ಚೆ ಮಾಡೋಣ? ಎಂಬುದನ್ನು ನಿರ್ಧರಿಸುವುದಕ್ಕೇಸ್ಕರ ತಾವು ಸಭೆಯನ್ನು ಕರೆದಿದ್ದೀರಿ ಎಂದು ತಿಳಿದುಕೊಂಡಿದ್ದೆವು. ಏಕೆಂದರೆ ಇದು ಬಹಳ ತುರ್ತು, ಮಹತ್ವವೆಂಬ ಉದ್ದೇಶದಿಹೌಂದ ಆದರೆ ಮೂರನೆಯ ದಿವಸ ಮಾನ್ಯ ಮುಖ್ಯ ಮಂತ್ರಿಗಳು ನಮ್ಮೆಲ್ಲರನ್ನೂ ಅವರ ಕೊಠಡಿಯಲ್ಲಿ ಕರೆದು ರಾಜ್ಯದ ಬೇರೆ ವಿಷಯಗಳ ಬಗ್ಗೆ ಸುದೀರ್ಘವಾಗಿ ಚರ್ಚೆ ಮಾಡಲು ಸದನವನ್ನು ಆನಂತರ ಕರೆಯೋಣ, ಈಗ ಸಧ್ಯಕ್ಕೆ ರಾಜ್ಯದಲ್ಲಿ ಬರಗಾಲ ಪರಿಸ್ಥಿತಿಯಿರುವ ಬಗ್ಗೆ ಮೂರು ದಿವಸಗಳ ತುರ್ತು ಅಧಿವೇಶನ ಕರೆಯೋಣ, ಎಂದು ಈ ವಿಷಯಕ್ಕೆ ಹೆಚ್ಚಿನ ಮಹತ್ವ ಬರಲಿ ಎಂಬ ಉದ್ದೇಶದಿಂದ ಪ್ರೀತಿಯಿಂದ ಹೇಳಿದರು, ತುರ್ತು ಅಧಿವೇಶನ ಕರೆಯಲೇಬೇಕೆಂದು ಎಲ್ಲರೂ ಒಟ್ಟಾರೆ ಒಪ್ಪಿದೆವು. ಆದರೆ ತಮಗೆ ಗೊತ್ತಿರುವಂತೆ ಈ ಅಧಿವೇಶನವನ್ನು ಕರೆದು ಉದ್ದೇಶರಾದರೂ ಏನು? ಈ ಅಧಿವೇಶನವನ್ನು 18ನೇ ತಾರೀಖಿನಂದೇ ಕರೆಯಬೇಕಾಗಿತ್ತು. ನಾನು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇನೆ ಏನೆಂದರೆ ಬರಗಾಲದ ಸಮಸ್ಯೆ ಬಗ್ಗೆ ಚರ್ಚೆ ಮಾಡುವುದು ಬಹಳ ಪ್ರಾಮುಖ್ಯವಾಗಿರುವುದರಿಂದ ತಾವು ಇದಕ್ಕೆ ಕಾಲ ನಿಗದಿ ಮಾಡಿ. ಸದರಿ ವಿಷಯದ ಮೇಲೆ ಯಾವಾಗ ಚರ್ಚೆಯಾಗಬೇಕೆಂದು ಹೇಳುವುದು ತಮಗೆ ಸೇರಿದ ವಿಚಾರವಾಗಿದೆ. ಇಡೀ ಸದನ ಇದರ ಬಗ್ಗೆ ಚರ್ಚೆ ಮಾಡಬೇಕಾಗಿದೆ ಇದರಲ್ಲಿ ರಾಜಕಾರಣ ಮಾಡುವ ಉದ್ದೇಶವಿಲ್ಲ. ರಾಜ್ಯದಲ್ಲಿರುವ ಬರಗಾಲದ ಪರಿಸ್ಥಿತಿ ಬಗ್ಗೆ ನಿರಂತರವಾಗಿ ಚರ್ಚೆಯಾಗಬೇಕಾಗಿದೆ. ಚರ್ಚೆ ಮಾಡುವುದಕ್ಕೆ ನಾವು ತಯಾರಾಗಿ ಬಂದಿದ್ದೇವೆ. ರಾಜ್ಯದ ಯಾವ್ಯಾವ ಸ್ಥಳಗಳಲ್ಲಿ ಬರಗಾಲ ಬಂದಿದೆ? ಅಲ್ಲಿನ ಪರಿಸ್ಥಿತಿ ಏನಾಗಿದೆ? ಎಂಬುದನ್ನೆಲ್ಲಾ ಹೇಳಬೇಕಾಗಿರುವುದರಿಂದ ತಾವು ಮೊದಲ ಬರಗಾಲದ ಪರಿಸ್ಥಿತಿ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶಸ ಮಾಡಿಕೊಟ್ಟು ಅವಿಶ್ವಾಸ ನಿರ್ಣಯವನ್ನು ಆನಂತರ ತೆಗೆದುಕೊಳ್ಳಬೇಕೆಂದು ತಮ್ಮಲ್ಲಿ ನಾನು ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಅಧ್ಯಕ್ಷರೆ, ಈಗ ತಾನೆ ನಮ್ಮ ನಾಯಕರು ನಿಲುವಳಿ ಸೂಚನೆ ಬಗ್ಗೆ ಕೆಲವು ಮಾತುಗಳನ್ನು ಪ್ರಸ್ತಾಪಿಸಿದರು. ತಾವು ಅದನ್ನು ನಿಯಮಾವಳಿ ರೀತ್ಯ ಗಣನೆಗೆ ತರದಿದ್ದರೂ ಕೂಡ ಸಾರ್ವತ್ರಿಕವಾಗಿ ಪತ್ರಿಕೆಗಳ ಮೂಲಕ ತಮಗೆ ತಿಳಿದಿದೆ. ಬರಗಾಲದ ಬಗ್ಗೆ ಇರತಕ್ಕಂಥ ಒಂದು ಅವಶ್ಯಕತೆ ಮತ್ತು ಈ ಸದನವನ್ನು ಏಕೆ ಕರೆದರು? ಇದರ ಹಿನ್ನೆಲೆ ಏನು? ಇದೆಲ್ಲವೂ ಪತ್ರಿಕೆಗಳ ಮೂಲಕ ತಮ್ಮ ಅನುಭವಕ್ಕೆ ಬಂದಿದೆ. ತಾವು ನಿಯಮಾವಳಿ ಪ್ರಕಾರ ಅದಕ್ಕೆ ಮಾನ್ಯತೆ ಕೊಡದಿದ್ದರೂ ಕೂಡ ನೈತಿಕವಾಗಿ ಇವ್ಮೊತ್ತು ಈ ಸದನವನ್ನು ಈ ರಾಜ್ಯ ಎದುರಿಸುತ್ತಿರತಕ್ಕ ಪ್ರಚಲಿತವಾದ ಒಂದು ದೊಡ್ಡ ಸಮಸ್ಯೆ ಕುರಿತು ಚರ್ಚಿಸುವುದಕ್ಕೆ ಕರೆಯಲಾಗಿದೆ. ಏತನ್ಮಧ್ಯೆ ಮಾನ್ಯ ವಿರೋಧ ಪಕ್ಷದ ನಾಯಕರು ಅವಿಶ್ವಾಸ ನಿರ್ಣಯವನ್ನು ಇಲ್ಲಿ ತಂದಿದ್ದಾರೆ. ಎಂದು ಅವಿಶ್ವಾಸ ನಿರ್ಣಯ ಸದನದ ಮುಂದೆ ಯಾವಾಗ ಬರಬೇಕು? ಎಂಬುದಕ್ಕೆ ಸರಿಯಾದ ಸ್ಥಾನ ಕೊಟ್ಟಿದ್ದೀರಿ., ಅನಂತರ ಅದರ ಬಗೆಗಿನ ಮುಂದಿನ ಕ್ರಮವನ್ನು ತೆಗೆದುಕೊಂಹಡಿದ್ದೀರಿ. ಆ ಕ್ರಮ ತೆಗೆದುಕೊಂಡ ನಂತರ ಮುಂದೆ ಹೇಗೆ ಚರ್ಚೆ ನಡೆಯಬೇಕು? ಎಂಬುದು ನಿಯಾಮವಳಿ ಪ್ರಕಾರ ಸ್ಪಷ್ಟವಾಗಿ ಕಾಣಿಸಲಾಗಿದೆ. ಅದರ ಪ್ರಕಾರ The Speaker

shall intimate the Leave is granted and the Motion will be taken up the next day or within three days thereafter as the Speaker desires. ಇದನ್ನು ನಾನು ಏಕೆ ಪ್ರಸ್ತಾಪಿಸಿದೆನೆಂದರೆ ಸಾಮನ್ಯರಾಗಿ ಸದನದ ಮುಂದೆ ಅವಿಶ್ವಾಸ ನಿರ್ಣಯ ತಂದಾಗ ಸಭಾನಾಯಕರು ಏಕೆಂದರೆ ಇದೊಂದು ನೈತಿಕವಾದ ಪ್ರಶ್ನೆಯಾಗಿರುವುದರಿಂದ ನಿರ್ಣಯವನ್ನು ಸದನದ ಮುಂದೆ ತಂದಾಗ ಆ ಬಗ್ಗೆ ಈಗಲೇ ಚರ್ಚೆಯಾಗಿ ನಿರ್ಣಯ ಡಿಸ್‌ಪೋಸ್ ಆಗಲಿ ಎನ್ನುವ ಮಾತು ಸಭಾ ನಾಯಕರ ಸೌಜನ್ಯಕ್ಕೆ ಸಂಬಂಧಪಟ್ಟದ್ದಾಗಿದೆ. ಅದರ ಬಗ್ಗೆ ಇವೊತ್ತು ನಾನು ಪ್ರಶ್ನಿಸುತ್ತಿಲ್ಲ.

ಅಧ್ಯಕ್ಷರು : ತಾವು ಸಹ ಹಿಂದೆ ಮುಖ್ಯಮಂತ್ರಿಗಳಾಗಿದ್ದಂಥ ಸಂದರ್ಭದಲ್ಲಿ ತಮ್ಮ ಸಚಿವ ಸಂಪುಟದ ವಿರುದ್ಧ ಅವಿಶ್ವಾಸ ನಿರ್ಣಯ ಮಂಡನೆಯಾದಾಗಲೂ ಇದೇ ನಿಲುವನ್ನು ತೆಗೆದುಕೊಂಡಿದ್ದಿರಿ.

Sri M. Veerappa moily : I am telling you Because it is a matter which we have to face, That is for the Leader of the House Ad a Leader of the House, it is nothing but proper for him to stand up and say that I am prepared to face it. ಆದರೆ ಪ್ರಶ್ನೆಯೇನೆಂದರೆ ಬರೀ ಸಭಾ ನಾಯಕರ ಒಂದು ವಿಚಾರಕ್ಕೆ ಇದು ಸೀಮಿತವಾಗಿರದೆ ಒಂದು ರಾಜ್ಯಕ್ಕೆ ನೀಮಿತವಾಗಿರುತ್ತದೆ. ಈ ಸದನಕ್ಕೆ ನೀಮಿತವಾಗಿರುತ್ತದೆ ಮತ್ತು ಈ ಸದನದ ಸದ್ಯಸರ ಹಕ್ಕಿಗೆ ಸೀಮಿತವಾಗಿರುತ್ತದೆ. A far as the Leader of the House is concerned, he is perfectly alright. But the matter before the House is Durought.ಆದುದರಿಂದ ಸದನ ಅಥರಾ ಈ ರಾಜ್ಯದ ಹಿತಾಸಕ್ತಿ ಇವೆರಡರಲ್ಲಿ ಯಾವುದಕ್ಕೆ ಪ್ರಾಮುಖ್ಯತೆ ಕೊಡಬೇಕೆಂಬುದು ಮುಖ್ಯ. ಅವಿಶ್ವಾಸ ನಿರ್ಣಯವನ್ನು ನಿಯಮ 60ರಡಿ ತರಬಹುದು ಅಥವಾ ರಾಜಕೀಯವಾಗಿ ತರಬಹುದು ಅಥವಾ ಒಂದು ತಾಂತ್ರಿಕ ಉದ್ದೇಶದಿಂದ ತರಬಹುದು. ಆದರೆ ಬರಗಾಲ ಪ್ರಶ್ನೆ ಬಂದಾಗ ಅದರಲ್ಲಿ ತಾಂತ್ರಿಕತೆ ಇಲ್ಲ ಅಥವಾ ಅದರಲ್ಲಿ ರಾಜಕೀಯವಿಲ್ಲ, ಇಡೀ ರಾಜ್ಯದ ಜನತೆಗೆ ಸಂಬಂಧಪಟ್ಟಿರುವ ಒಂದು ಅತ್ಯಂತ ಪ್ರಮುಖ್ಯವಾದಂಥ ವಿಚಾರ ಬಂದಾಗ It is for the Hon'ble Speaker and the House to decide which stands on priority. Is it a political Weapon of No Confidence Motion is important or the immedite problem of the drought which is faced by the people of Karnataka. ಇದನ್ನು ತಾವು ತಮ್ಮ ತಕ್ಕಡಿಯಲ್ಲಿ ತೂಕ ಮಾಡಿ ಒಂದು ನಿರ್ಣಯ ಮಾಡಬೇಕಾದಂಥ ಪ್ರಶ್ನೆಯನ್ನು ಇವೊತ್ತು ಮಾನ್ಯ ಸಭಾ-ನಾಯಕರು ತಮ್ಮ ಮುಂದಿಟ್ಟಿದ್ದಾರೆ. ಇದು ತಮ್ಮ ವಿವೇಚನೆಗೆ ಬಿಟ್ಟಿದ್ದುದು. ನಿಮ್ಮ ತಕ್ಕಡಿಯಲ್ಲಿ ಯಾವುದಕ್ಕೆ ಹೆಚ್ಚು ಭಾರ , ಯಾವುದಕ್ಕೆ ಹೆಚ್ಚು ಪ್ರಮುಖ್ಯತೆ ಆಧ್ಯತೆ ಮತ್ತು ನಮ್ಮ ಎಲ್ಲಾ ಸದಸ್ಯರ ತಕ್ಷಣ ಆದ್ಯತೆ, ಗಮನ ಏಕೆಂದರೆ ರಾಜ್ಯದಲ್ಲಿ ಒಂದು ಪ್ರಳಯ, ಪ್ರವಾಹ, ಬರಗಾಲ ಬರುತ್ತದೆ.

It canot wait even for a minute, for action, ಆದುದರಿಂದ ಇದರ ಬಗ್ಗೆ ನನ್ನ ಸೂಚನೆ ಏನೆಂದರೆ, ಇದರ ಬಗ್ಗೆ ತಾವು ತಕ್ಷಣವೇ ತೀರ್ಪು ನೀಡಬೇಕೆಂದು ನಾನು ನಿರೀಕ್ಷಿಸುವುದಿಲ್ಲ. But, you have any way I think.... ನಿನ್ನೆ ಅಥವಾ ಮೊನ್ನೆ ದಿವಸ ಸದನದ ಕಾರ್ಯಕಲಾಪಗಳ ಸಲಹಾ ಸಮಿತಿ ಸಭೆ ಕರೆದಿದ್ದರೆ ಇವೊತ್ತು ಈ ಪ್ರಶ್ನೆ ಇಲ್ಲ ಉದ್ಭವಿಸುತ್ತಿರಲಿಲ್ಲ. You could have convinced us or we could have convinced you, But unfortunately, ಕಾರ್ಯಕಲಾಪವನ್ನು ನಿರ್ಣಯಿಸುವಂಥ ಒಂದು ಸಮಾಲೋಚನೆ ಮಾಡುವ ಪರಿಸ್ಥಿತಿ ನಮಗೆ ಹಿಂದೆ ಬರದಿದ್ದ ಕಾರಣ ಈ ಪ್ರಶ್ನೆಯನ್ನು ಇವೊತ್ತು ಈ ಸದನದಲ್ಲಿ ಪ್ರಸ್ತಾಪಿಸಬೇಕಾದ ಅವಶ್ಯಕತೆ ಬಂತು.

ಆದುದರಿಂದ ದಯಮಾಡಿ ಸದನವನ್ನು ಮುಂದೂಡಿ Kindly either you can prepone the Business Advisory Committee or you can call the Business Advisory Committee at 3 PM or 4 PM. ಇದನ್ನು ನಿರ್ಧರಿಸಿ, ನಾವು ಯಾವುದಕ್ಕೂ ಅಡ್ಡಿ ಬರುವುದಿಲ್ಲ. ಇವೊತ್ತು ನಾಲ್ಕು ಗಂಟೆಯೊಳಗಾಗಿ ಇಲ್ಲದಿದ್ದರೆ ತಕ್ಷಣವೇ ಅವರನ್ನು ಕರೆದು ಯಾವುದಕ್ಕೆ ಆದ್ಯತೆ ಕೊಡಬೇಕೋ ಅದರ ಬಗ್ಗೆ ನಿರ್ಣಯ ತೆಗೆದುಕೊಳ್ಳಿ. ನಾನು ಮಾನ್ಯ ಸಭಾ ನಾಯಕರ ಸೌಜನ್ಯತೆಯನ್ನು ಪ್ರಶ್ನಿಸುತ್ತಿಲ್ಲ. He is right in raising and saying that let it be taken up, But the question is about the whole priority which has to be attributed to a particular subject.

ಆದುದರಿಂದ ಈ ತೂಕದ ದೃಷ್ಟಿಯಿಂದ, ಮಹತ್ವದ ದೃಷ್ಟಿಯಿಂದ ಇವತ್ತು ಬರಗಾಲದ ಪ್ರಶ್ನೆ ಅತ್ಯಂತ ಪ್ರಮುಖವಾದಂಥ ಪ್ರಶ್ನೆಮೌ. ಮತ್ತು ರೂಲ್ಸ್ ಪ್ರಕಾರವು ಸಹ Adjourment Motion when it is considered proper, you will have to consider first. As far as No Confidence Motion is concerned if it is not necessary to take up right now, you can take up the same the next day under teh rule or you can suspend the rule which is a different matter. As far as the rule is concerned, it has to be taken up the next day or 3days thereafter, This is the provision of the rule. ಆದುದರಿಂದ ಬಿಸ್‌ನೆಸ್ ಅಡ್ವೈಸರಿ ಸಮಿತಿಯಲ್ಲಿ ಇದರ ಯುಕ್ತಾಯುಕ್ತತೆಯ ಬಗ್ಗೆ ಚರ್ಚೆ ಮಾಡಬೇಕು. ತಾವು ಇದರ ಬಗ್ಗೆ ಗಮನಕೊಡಬೇಕು.

ಶ್ರೀ ಹೆಚ್.ಎನ್. ನಂಜೇಗೌಡ : ಸನ್ಮಾನ್ಯ ಅಧ್ಯಕ್ಷರೆ, ಈಗ ಸಭೆಯಲ್ಲಿ ಸರ್ಕಾರದ ಬಗ್ಗೆ ಅವಿಶ್ವಾಸ ನಿರ್ಣಯದ ಸೂಚನೆಯನ್ನು ಮಂಡಿಸಿದ್ದೇವೆ. ಅದಕ್ಕೆ ಸಭೆಯ ಒಪ್ಪಿಗೆ ಸಲ್ಲಿಸಿತು. ಸೌಜನ್ಯಕ್ಕೆ ಮುಖ್ಯಮಂತ್ರಿಗಳೇನೋ. ಹೇಳಿದರು, ಮಾನ್ಯ ಖರ್ಗೆಯವರು ಮತ್ತು ಇನ್ನೂ ಕೆಲವರು ಸೇರಿ ನನ್ನನ್ನು ಅಧಿಕಾರದಿಂದಲೇ ತೆಗೆದುಹಾಕಿಬಿಟ್ಟರೆ ಸಭೆಯ ಕಲಾಪಗಳಿಗೆ ಉತ್ತರಗಳನ್ನು ಕೊಡಲು ನನಗೆ ನೈತಿಕವಾದ ಹಕ್ಕೇನಿರುತ್ತದೆ ಎನ್ನುವುದು ಅವರ ಸೌಜನ್ಯದ ತೀರ್ಮಾನ, ಈ ಬರಗಾಲದ ಪರಿಸ್ಥಿತಿಯ ಬಗ್ಗೆ ನಿಲುವಳಿ ಸೂಚನೆಯನ್ನು ಮೊದಲು ಕಳುಹಿಸಿರತಕ್ಕವರು ನಾವೇ, ಏಕೆಂದರೆ ಜನರಿಗೆ ತಪ್ಪು ತಿಳುವಳಿಕೆ ಹೋಗಬಾರದು. ಏಕೆಂದರೆ, ಬರಗಾಲದ ಬಗ್ಗೆ ಹೆಚ್ಚು ಓಡಾಟ ಮಾಡಿ ಅಧ್ಯಯನ ಮಾಡಿ ಜನರ ಗಮನವನ್ನು ಸೆಳೆದಂಥವವು ನಮ್ಮ ನಾಯಕರು Let us not send wrong signals to the people ಏಕೆಂದರೆ ಇದನ್ನು ಟ್ವಿಸ್ಟ್ ಮಾಡುವುದು ಬೇಡ. ಈಗ ನಾವು 6 ತಿಂಗಳವರೆಗೆ ಓಟ್‌ಆನ್ ಅಕೌಂಟ್ ಕೆಟ್ಟೆವು. ನೀವು ತಿಳಿದುಕೊಂಡಿರುವ ಮಟ್ಟಿಗೆ ಬರಗಾಲದ ಬಗ್ಗೆ ಸರ್ಕಾರಕ್ಕೆ ಅಷ್ಟೊಂದು ಕಳಕಳಿ ಇದ್ದು ಬರದ ಬಗ್ಗೆಯೇ ಚರ್ಚೆ ಮಾಡಲು ಅಧಿವೇಶನವನ್ನು ಕರೆದರು ಎನ್ನುವುದನ್ನು ನಾನು ಒಪ್ಪುವುದಕ್ಕೆ ತಯಾರಿಲ್ಲ. It is their Constitutuional obligation to sumom the session That is why they have called ಒಂದು ವರ್ಷ ಅಧಿವೇಶನವನ್ನು ತಳ್ಳಬಹುದಾಗಿದ್ದರೆ ತಳ್ಳಿಯೇ ಬಿಡುತ್ತಿದ್ದರೆಂದು ನನ್ನ ತೀರ್ಮಾನ ಮತ್ತು ಅಭಿಪ್ರಾಯ. 6 ತಿಂಗಳಿಗೆ ಓಟ್‌ಆನ್‌ಅಕೌಂಟ್ ತೆಗೆದು ಕೊಳ್ಳುತ್ತೀರಿ, ಇನ್ನು 6 ತಿಂಗಳಿನಲ್ಲಿ ಬೇಡಿಕೆಗಳ ಬಗ್ಗೆ ಚರ್ಚೆಯಾಗಲೇ ಬೇಕು ಆದ್ದಿರಿಂದ ನೀವು ಅಧೀವೇಶನವನ್ನು ಕರೆಯಲೇಬೇಕು. ಅದಕ್ಕೆ ನಾನೇನು ಹೇಳುತ್ತಿದ್ದೇನೆಂದರೆ ಬರಗಾಲದ ಬಗ್ಗೆ ನೋಟೀಸನ್ನು ನಾವು ಮೊನ್ನೆಯೇ ಕಳಿಸಿಕೊಟ್ಟಿದ್ದೇವೆ, ಅದು ತಮ್ಮ ಗಮನಕ್ಕೆ ಬಂದಿರಬಹುದು. ಬರಗಾಲದ ಬಗ್ಗೆ ನಿಲುವಳಿ ಸೂಚನೆಯನ್ನು ನಾವು ಮೊನ್ನೆಯೇ ಕಳುಹಿಸಿ ಕೊಟ್ಟಿದ್ದೇವೆ. ಏಕೆಂದರೆ ಬರಗಾಲದ ಪರಿಸ್ಥಿತಿಯ ಬಗ್ಗೆ ಮಾನ್ಯ ಖರ್ಗೆಯವರಿಗೆ ಮೊಯಿಲ್ಲರವರಿಗೆ ವಾಟಾಳ್ ನಾಗರಾಜ್‌ರವರಿಗೆ, ಬಂಗಾರಪ್ಪನವರಿಗೆ ನಾನು ಹೇಳುತ್ತೇನೆ.

(ಗೊಂದಲ)

ಶ್ರೀ ಹೆಚ್.ಎನ್. ನಂಜೇಗೌಡ : ನಿಮ್ಮ ನಾಯಕರು ಬರಗಾಲವನ್ನು ನೋಡಲು ಹೋಗಲಿಲ್ಲ, ಲೋಕಸಭೆಯ ಚುನಾವಣೆ ಬರುತ್ತದೆ ಅರ್ಜಿಯನ್ನು ಪಡೆದುಕೊಳ್ಳೋಣವೆಂದು ಹೋದರು. ಜನತಾದರ್ಶನ ಮಾಡಿಕೊಂಡು ಆ ರೀತಿ ಮಾಡಿದರು.

(ಗೊಂದಲ

ಶ್ರೀ ವಿ. ಸೋಮಣ್ಣ : ಆ ಮಾತನ್ನು ವಾಪಸ್ ತೆಗೆದುಕೊಳ್ಳಬೇಕು.

(ಗೊಂದಲ)

ಶ್ರೀ ಹೆಚ್.ಎನ್. ನಂಜೇಗೌಡ : ಮಾನ್ಯ ಅಧ್ಯಕ್ಷರೆ, The Truth is always bitter ನಾನು ಏನು ಹೇಳುತ್ತೇನೆಂದರೆ, ನಮ್ಮ ನಾಯಕರು ಒಂದು ತಿಂಗಳ ಕಾಲ ಬರಗಾಲದ ಬಗ್ಗೆ ಅಧ್ಯಯನ ಮಾಡುವುದಕ್ಕಾಗಿಯೇ ರಾಜ್ಯಾದ್ಯಂತ ಪ್ರವಾಸ ಮಾಡಿದರು, ಖರ್ಗೆಯವರು ಮತ್ತು ಸಭಾನಾಯಕರು ಸಹ ಪ್ರವಾಸ ಮಾಡಿದ್ದಾರೆ. ಅದನ್ನು ನೋಡಿದರೆ ಬರಗಾಲದ ಬಗ್ಗೆ ಯಾರಿಗೆ ಹೆಚ್ಚು ಕಳಕಳಿ ಇದೆ ಎನ್ನತಕ್ಕದ್ದು ಜನರಿಗೂ ಸಹ ಅರ್ಥವಾಗಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸನ್ಮಾನ್ಯ ಅಧ್ಯಕ್ಷರೆ, ನಾವು ಎಷ್ಟು ಪ್ರವಾಸ ಮಾಡಿದ್ದೇವೆ, ಅವರು ಎಷ್ಟು ಪ್ರವಾಸ ಮಾಡಿದ್ದಾರೆ ಎನ್ನುವ ಬಗ್ಗೆ ಬೇಕಾದರೆ ಲೆಕ್ಕವನ್ನು ಕೊಡೋಣ. ಆದರೆ ನೀವು ವಿರೋಧಪಕ್ಷದಲ್ಲಿದ್ದು ಅವರು ಏನು ಮಾಡಿದ್ದಾರೆ ಇವರೇನು ಮಾಡಿದ್ದಾರೆ ಎಂದು ಹೇಳತಕ್ಕದ್ದು ಸರಿಯಲ್ಲ. ನಮ್ಮ ಕೆಪ್ಯಾಸಿಟಿಯ ಪ್ರಕಾರ ನಾವೆಲ್ಲಾ ಹೋಗಬೇಕೋ ಅಲ್ಲಿಗೆ ಹೋಗಿದ್ದೇವೆ, ಆದರೆ ತಾವು ವಿರೋಧ ಪಕ್ಷದ ನಾಯಕರಾಗಿ ಸದನದಲ್ಲಿರುವ ಎಲ್ಲಾ ಸದಸ್ಯರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಹೋಗುವುದನ್ನು ಬಿಟ್ಟು ಇಲ್ಲಿ ವಿಭಾಗ ಮಾಡುವುದಕ್ಕೆ ನಿಂತು ನಾವು ಅದನ್ನು ಮಾಡಿದ್ದೇವೆಸ ಇದನ್ನು ಮಾಡಿದ್ದೇವೆ ಎಂದು ಹೇಳತಕ್ಕದ್ದು ಸರಿಯಲ್ಲ. ಅವರು ಎಲ್ಲೆಲ್ಲಿ ಹೋಗಿದ್ದಾರೆ ಎಂಬ ಬಗ್ಗೆ ನಾನು ಕೇಳುತ್ತೇನೆ. ಅವರು ಅವರ ಪಕ್ಷದ ಆರ್ಗನೈಸ್ ಮಾಡಲು ನಿಮ್ಮ ಕೇಡರ್‌ನ್ನು ಎಬ್ಬಿಸಲು ಹೋಗಿದ್ದೀರಿ.

(ಗೊಂದಲ)

ಶ್ರೀ ಇ. ಮಾರುತಿರಾವ್‌ಪವಾರ್ : ಜನತಾದಳ ಮತ್ತು ಕಾಂಗ್ರೆಸ್‌ನವರು ಶಾಮಿಲಾಗಿದ್ದೀರಿ ಎಂಬುದನ್ನು ತೋರಿಸುತ್ತಿದ್ದೀರಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಶಾಮಿಲಾಗಿರುವುದು ನೀವು, ನಾವಲ್ಲ, ಇಲ್ಲಿ ವಿಷಯವನ್ನು ಎತ್ತುವುದು ಅನಂತರ ಕಾಂಪ್ರಮೈಸ್ ಮಾಡುಕೊಳ್ಳುವುದು ನೀವು, ನಾವಲ್ಲ ನಿಮ್ಮಂತೆ ಬ್ಲಾಕ್‌ಮೇಲ್ ಮಾಡುವುದಕ್ಕೆ ನಮಗೆ ಬರುವುದಿಲ್ಲ ಆ ರೀತಿ ತಾವು ಮಾತನಾಡುವುದಿದ್ದರೆ ಪಾಯಿಂಟ್‌ಆಫ್ ಆರ್ಡರ್ ಮೇಲೆ ಹೇಳಿ.

ಶ್ರೀ ಹೆಚ್.ಎನ್. ನಂಜೇಗೌಡ : ಅವರು ಬ್ಲಾಕ್‌ಮೇಲ್ ಎನ್ನತಕ್ಕ ಪದವನ್ನು ವಾಪಸ್ ತೆಗೆದುಕೊಳ್ಳಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಮಗೇಕೆ ಸರ್ಕಾರದೊಂದಿಗೆ ಶಾಮಿಲಾಗಿದ್ದಾರೆಂದು ಹೇಳುತ್ತೀರಿ. ತಾವು ಇವತ್ತು ಹಲವಾರು ವಿಚಾರಗಳ ಬಗ್ಗೆ ಹತ್ತು ಸಾರಿ ಮಾನ್ಯ ಮುಖ್ಯಮಂತ್ರಿಗಳ ಮನೆಗೆ ಹೋಗಿ ಭೇಟಿಯಾಗಿರಬೇಕು, ಆದರೆ ನಾವು ಯಾವುದೇ ಕೆಲಸವನ್ನು ಮಾಡಿಸಿಕೊಳ್ಳಲು ಒಂದು ಬಾರಿ ಸಹ ಹೋಗಿಲ್ಲ. ಬಿಜೆಪಿ ಪಕ್ಷದವರು ಯಾವುದಾದರು ಸೇವಾರ್ಥ ಕೆಲಸಕ್ಕೆ ದೇವೇಗೌಡರನ್ನು ಹತ್ತುಸಾರಿ ಭೇಟಿಯಾಗಿದ್ದೀರಿ. ಆದರೆ ನಾನು ಯಾವುದಾದರು ಕೆಲಸಕ್ಕೆ ಒಂದು

ಸಾರಿ ಭೇಟಿಯಾಗಿರುವ ಬಗ್ಗೆ ತೋರಿಸಿದರೆ ನಾನು ಇವತ್ತೋ ರಾಜೀನಾಮೆಯನ್ನು ಕೊಡತ್ತೇನೇ. ನಾವು ಸೌಜನ್ಯತೆಯಿಂದ ಇಲ್ಲಿ ಕುಳಿತುಕೊಳ್ಳುತ್ತೇವೆಂದು ಅದನ್ನು ಹಗುರವಾಗಿ ಪರಿಗಣಿಸಬಾರದು, Don't talk so lightly we know how to tackle weakness. ನಾವು ಇಲ್ಲಿ ಒಂದು ಸೌಜನ್ಯತೆಯಿಂದ ಕುಳಿತುಕೊಳ್ಳುತ್ತೇವೆಂದರೆ ಅದನ್ನು ನಮ್ಮ ವೀಕ್‌ನೆಸ್ ಎಂದು ತಾವು ತಿಳಿದುಕೊಳ್ಳಬಾರದು.

(ಗೊಂದಲ)

ಅಧ್ಯಕ್ಷರು : ನೀವು ಇಲ್ಲಿರುತಕ್ಕವರು, ನಿಮ್ಮ ಸನ್ಯಾಸ್ಯ ವಿರೇಧ ಪಕ್ಷದ ನಾಯಕರಾಗಲಿ, ನಂಜೇಗೌಡರಾಗಲಿ. ಈ ಸದನದ ಕಲಾಪಗಳಿಗೆ ಹೋಸಬರೇನಲ್ಲ, ಇದೆಲ್ಲ ಸಾಮಾನ್ಯವಾಗಿ ನಡೆಯತಕ್ಕದ್ದು ಇದನ್ನು ನಿಭಾಯಿಸಿಕೊಳ್ಳತಕ್ಕ. ಶಕ್ತಿ, ಚೈತನ್ಯ ಅವರುಗಳಲ್ಲಿದೆ. ನೀವು ಎಲ್ಲರೂ ಒಟ್ಟಿಗೆ ಎದ್ದರೆ ದೊಂಬಿಯಾಗುತ್ತದೆ ಆದರಿಂದ ನಡೆಯಲು ಸಾಧ್ಯವಾಗುವುದಿಲ್ಲ. ಅದಕ್ಕೆ ದಯಮಾಡಿ ಅವಕಾಶ ಮಾಡಿಕೊಡಬೇಡಿ. ಏನೇ ಬಂದರು ಅವರು ಅದನ್ನು ಎದುರಿಸುತ್ತಾರೆ, ಆವರಿಗೆ ಮಿರಿದ್ದು ಏನಾದರೂ ಇದ್ದರೆ ಅದನ್ನು ನಿಬಾಯಿಸಲು ನಾನಿದ್ದೇನೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಸನ್ಯಾಸ್ಯ ಅಧ್ಯಕ್ಷರೆ, ಸನ್ಯಾಸ್ಯ ನಂಜೇಗೌಡರು ಮಾನ್ಯ ಖರ್ಗೆಯವರು ಮಾತನಾಡಿದ ವಿಷಯದ ಬಗ್ಗೆ ತಮಗೇನು ಬರಗಾಲದ ಬಗ್ಗೆ ಕಳಕಳಿ ಇದೆ ಅದಕ್ಕಿಂತ ಎರಡು ಪಟ್ಟು ನಮಗೆ ಜಾಸ್ತಿ ಕಳಕಳಿ ಇದೆ. ಇದರ ಬಗ್ಗೆ ಮೊನ್ನೆಯೇ ನಿಲುವಳಿ ಸೂಚನೆಯನ್ನು ಕಳಿಸಿಕೊಟ್ಟಿದ್ದೇವೆಂದು ಹೇಳಿದರು., ಖರ್ಗೆಯವರು ಸಹ ರಾಜ್ಯದಲ್ಲಿ ಬರಗಲಾದ ಬಗ್ಗೆ ಪ್ರವಾಸ ಮಾಡಿರಬಹುದು. ಆದರೆ ಕಳಕಳಿ ಯಾರಿಗೆ ಹೆಚ್ಚು ಇದೆ ಎನ್ನುವುದನ್ನು ಜನರು ತೀರ್ಮಾನ ಮಾಡುತ್ತಾರೆ. ಇವತ್ತು ರಾಜ್ಯದ ಮುಖ್ಯಮಂತ್ರಿಗಳ ಹತ್ತಿರ, ಅವರು ಯಾರೇ ಇರಬಹುದು ರಾಜ್ಯದ ಜನರ ಹಿತದೃಷ್ಟಿಯಿಂದ ಜನರ ಸಮಸ್ಯೆಗಳು ಬಂದಾಗ ಅವರು ಯಾವುದೇ ಒಂದು ಪಕ್ಷದ ಮುಖ್ಯಮಂತ್ರಿಯಲ್ಲ. ಜನರ ಹಿತದೃಷ್ಟಿಯಿಂದ ಮುಖ್ಯಮಂತ್ರಿಗಳ ಹತ್ತಿರ ಯಾರು ಬೇಕಾದರು ಹೋಗಬೇಕಾಗುತ್ತೆ. ನಾವು ಜನರ ಹಿತದೃಷ್ಟಿಯಿಂದ ಹೋಗಿದ್ದೆವು, ಖರ್ಗೆಯವರು ಹಿಂದೆ ಮಾಡಬಾರದನ್ನು ಮಾಡಿದ್ದನ್ನು ರಕ್ಷಣೆ ಮಾಡುವುದಕ್ಕೆ ರಾತ್ರಿಯಹೋತ್ತು ಅವರ ಮನೆಗೆ ಹೋಗಬಹುದು, ಆದೇ ನಮಗೆ ಅವರಿಗೂ ಇರುವ ವ್ಯತ್ಯಾಸ. ಇದಕ್ಕೇನು ಹೇಳುತ್ತೀರಿ?

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇದನ್ನು ನಾನು ಬಹಳವಾಗಿ ಖಂಡಿಸುತ್ತೇನೆ. strongly oppose this I Condemn this. I strongly object for this

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಈಲ್ಡ್ ಆಗಿಲ್ಲ, ಮಾನ್ಯ ಅಧ್ಯಕ್ಷರೆ, ನಾನು ಮಾತನಾಡಲು ಅವಕಾಶಕೊಡಿ. ಇವತ್ತು ನಮ್ಮ ಹಿರಿಯ ನಾಯಕರಾದ ನಂಜೇಗೌಡರು ಎದ್ದು ನಿಂತಾಗ ಅವರು ಈ ಮಾತನ್ನು ಹೇಳಿದರು.

ಅಧ್ಯಕ್ಷರು : ನಾನು ತಮ್ಮಲ್ಲಿ ಏನು ವಿನಂತಿ ಮಾಡುತ್ತೇನೆಂದರೆ, ಈ ಹತ್ತನೆಯ ವಿಧಾನ ಸಬೆಗೆ ಬಹಳ ಗೌರವ ಬರುವ ರೀತಿಯಲ್ಲಿ ತಾವೆಲ್ಲರೂ ಸಹಕರಿಸಿ ಬಹಳ ಉತ್ತಮ ಮಟ್ಟದಲ್ಲಿ ನಮ್ಮ ಕಲಾಪಗಳನ್ನು ನಡೆಸಿಕೊಂಡು ಹೋಗುತ್ತಿದ್ದೇವೆ ಎನ್ನತಕ್ಕ ಭಾವನೆ ನನ್ನಲ್ಲಿದೆ.

ತಾವು ಎಷ್ಟೇ ತೀವ್ರರಾದಂತಹ ವಾದ ಮಂಡನೆ ಮಾಡುವಾಗ, ಅಭಿಪ್ರಾಯ ವ್ಯಕ್ತ ಮಾಡುವಾಗ ಮತ್ತೊಬ್ಬ ಸಹ ಸದಸ್ಯರ ಮನಸ್ಸಿಗೆ ನೋವು ಆಗದೆ ಇರತಕ್ಕಂತಹ ರೀತಿಯಲ್ಲಿ ಮಾತನಾಡತಕ್ಕಂಥದ್ದನ್ನು ಎಲ್ಲರೂ ತಿಳಿದಿದ್ದೀರಿ. ಯಾವುದೇ ಕಾರಣಕ್ಕೂ ಕೂಡ ನಾವು ಆಡತಕ್ಕಂತಹ ಮಾತಿನಿಂದ ಭಾವೋದ್ವೇಗಕ್ಕೆ ಅವರು ಒಳಗಾಗುವುದಾದರೆ ಸಭೆಯ ವಾತಾವರಣ ಕಲುಷಿತವಾಗುತ್ತದೆ, ಅದು ನಮಗೆ ಯಾರಿಗೂ ಗೌರವ ತರತಕ್ಕಂಥದ್ದೂ ಅಲ್ಲ. ದಯಾಮಾಡಿ ಇದನ್ನು ತಾವೆಲ್ಲರೂ ಗಮನದಲ್ಲಿಟ್ಟುಕೊಳ್ಳಬೇಕೆಂದು ನಾನು ತಮ್ಮಲ್ಲಿ ವಿನಂತಿ ಮಾಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಶ್ರೀ ನಂಜೇಗೌರಡ ಬಗ್ಗೆ ಒಬ್ಬ ಹಿರಿಯ ಸಂಸದೀಯ ಪಟು ಬಗ್ಗೆ ಮಾತನಾಡಬೇಕಾದರೆ ಅವರು ಯಾವದೋ ಕಾರಣಕ್ಕೆ ಅವರ ಮನೆಗೆ ಹೋಗುತ್ತೀರಿ ಎಂದು ಹೇಳುವಂತಹ ಧಾಟಿ ಇದೆಯಲ್ಲಾ ಇದು ಆ ಸ್ಥಾನಕ್ಕೆ ಜವಾಬ್ದಾರಿಯಾಗಿರುವಂತಹವರಿಗೆ, ಗೌರವ ತರುವಂತಹ ಸಂಗತಿಯಲ್ಲ ಎಂದು ನಾನು ಹೇಳುತ್ತೇನೆ.ನಾನು ಏನು ಹೇಳಿದ್ದೇನೆ ಅದನ್ ರೆಕಾರ್ಡ್ ತೆಗೆಸಿ ನೋಡಿ. ನಾಳೆ ದಿವಸ ಜನರ ಹಿತಕೋಸ್ಕರ ನಾವು ಹೋಗುತ್ತೇವೆ. ನೀವು ಹಿಂದೆ ಯಾವುದೋ ಮಾಡಬಾರದ್ದನ್ನು ಮಾಡಿದ್ದರೆ ಅದನ್ನು ಮುಚ್ಚಿಟ್ಟುಕೊಳ್ಳುವುದಕ್ಕೆ ಅವರ ಜೊತೆ ಹೊಂದಾಣಿಕೆ ಮಾಡಿಕೊಳ್ಳುದಕ್ಕೆಕ ರಾತ್ರಿ ಹೋದರು ಎಂದು ನಾವು ಹೇಳಿದರೆ ಅವರ ಮನಸ್ಸಿಗೆ ನೋವಾಗುತ್ತದೆಯೋ ಇಲ್ಲವೋ? ಅದಕ್ಕೋಸ್ಕರ ತಾವು ರೆಕಾರ್ಡ್ ತೆಗೆಸಿ ನೋಡಿ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈ ಸದನದ ಸಮಿತಿ ಕರೆಯಿರಿ. He should prove that. He should not talk irresponsibly. He is the Leade of teh Opposition .

ಶ್ರೀ ಬಿ.ಎಸ್. ಯಡಿಯೂರಪ್ಪ : ತಾವು ರೆಕಾರ್ಡ್ ತೆಗೆಸಿ ನೋಡಿ ತಮಗೆ ನೋವಾಗುವಂತಥದ್ದು ಹೇಳಿದ್ದರೆ ಈ ಆಪೊಸಿಷನ್ ಪಾರ್ಟಿ ಲೀಡ್ ಇದ್ದರೆ ಈ ಭಾಗದ ನಮ್ಮ ಎಲ್ಲಾ ಸದಸ್ಯರಿಗೆ ನಾನು ಜೊತೆಗೆ ತೆಗೆದುಕೊಂಡು ಹೋಗಬೇಕಾಗುತ್ತದೆ. ಆ ಜವಾಬ್ದಾರಿಯ ಅರಿವು ನನಗೆ ಇದೆ. ಈ ಹಿನ್ನೆಲೆಯಲ್ಲಿ ಮಾನ್ಯ ಖರ್ಗೆಯವರಾಗಲಿ, ನಮ್ಮಹಿರಿಯ ಸದಸ್ಯರಾಗಲಿ ಅವಿಶ್ವಾಸ ನಿರ್ಣಯ ಗೊತ್ತುವಳಿ ಮಂಡನೆ ಮಾಡುವಲ್ಲಿ ನಾನು ಎಷ್ಟು ಪ್ರಾಮಾಣಿಕ ಪ್ರಯತ್ನ ಮಾಡಿದ್ದೇನೆ, ಅದು ಬೇರೆ ವಿಷಯ. ಸನ್ಮಾನ್ಯ ನಂಜೇಗೌಡರು ತುಂಬಾ ಜವಾಬ್ದಾರಿ ಸ್ಥಾನದಲ್ಲಿ ಇದ್ದು ಕೊಂಡು ಮಾತನಾಡಬೇಕಾದರೆ ಆ ರೀತಿ ನೇರವಾಗಿ ಅವರಿಗೆ ಅಪಮಾನ ಮಾಡುವ ರೀತಿಯಲ್ಲಿ ಏನೋ ಒಂದು ಸಂಬಂಧ ಕಲ್ಪಿಸುವ ರೀತಿಯಲ್ಲಿ ಮಾತನಾಡುವುದು ಅಕ್ಷಮ್ಯ ಅಪರಾಧ ಖರ್ಗೆಯಂತಹವರಿಗೆ ಇದು ಶೋಭ ತರುವಂಥದ್ದು ಅಲ್ಲ. ದಯವಿಟ್ಟು ಆ ಪದಗಳನ್ನು ವಿತ್‌ಡ್ರಾ ಮಾಡಿಕೊಳ್ಳಿ.

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಅಧ್ಯಕ್ಷರೆ, ಇಲ್ಲಿ ಏನಾಗಿದೆ ಎಂದರೆ ನಾನು ಕೂಟ ವಿರೋಧ ಪಕ್ಷದ ನಾಯಕನಾಗಿ ಕೆಲಸ ಮಾಡಿದ್ದೇನೆ. ಮಾನ್ಯ ಬಂಗಾರಪ್ಪನವರೂ ಮಾಡಿದ್ದಾರೆ, ಸಭಾ ನಾಯಕರೂ ಕೂಡ ಮಾಡಿದ್ದಾರೆ. ಆದರೆ ಇವತ್ತು ಇಲ್ಲಿ ಪ್ರಸಂಗ ನಡೆದಿದೆ. ಬಹುಶಃ ಈ ತರಹ ನಾವು ವಿರೋಧ ಪಕ್ಷದ ನಾಯಕರಾಗಿ ಕೆಲಸ ಮಾಡಲಿಲ್ಲ. ಈ ತರಹ ಮಾಡಬಾರದು.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ನಮ್ಮ ನಾಯಕರ ಬಗ್ಗೆ ಮಾತನಾಡುವುದಕ್ಕೆ ನಿಮಗೆ ಏನೂ ಹಕ್ಕಿಲ್ಲ, ಅವರು ಜನತೆ ಪರವಾಗಿ ಮಾತನಾಡಿದ್ದಾರೆ. ನಿಮಗೆ ಕಿಂಚಿತ್ತೂ ನೈತಿಕ ಹಕ್ಕಿಲ್ಲ.

(ಗೊಂದಲ)

ಶ್ರೀ ಚಂದ್ರಕಾಂತಜಿ ಬೆಲ್ಲದ : ಇಲ್ಲಿಯವರೆಗಿನ ವಿರೋಧಪಕ್ಷದವರು ವಿರೋಪಕ್ಷಕ್ಕೆ ಗೌರವವನ್ನು ತರುವಂತಹ ಕಾರ್ಯವನ್ನು ಮಾಡಿದ್ದಾರೆ. ನಿಮ್ಮದು ಏನು ಹೇಳಿ.

ಶ್ರೀ ಎಂ. ವೀರಪ್ಪಮೊಯಿಲಿ : ಮಾನ್ಯ ಯಡಿಯೂರಪ್ಪನವರು ವಿರೋಧ ಪಕ್ಷದ ನಾಯಕರಾಗಿ ಅವರಿಗೆ ವಿಶೇಷವಾದ ಗೌರವ ಬರಬೇಕೆಂಬುದೇ ನಮ್ಮ ಅಪೇಕ್ಷೆ. ನೀವು ಅದಕ್ಕೆ ವಿರುದ್ದವಾಗಿ ಮಾತನಾಡಬೇಡಿ.

ಶ್ರೀ ಕೆ.ಎಸ್. ಈಶ್ವರಪ್ಪ : ನಿಮ್ಮ ಸರ್ಟಿಫಿಕೇಟ್ ನಮಗೆ ಬೇಕಾಗಿಲ್ಲ. ಜನತೆ ಕೊಟ್ಟಿದ್ದಾರೆ, ಇವರ ಸರ್ಟಿಫಿಕೇಟ್ ನಮಗೆ ಬೇಕಗಿಲ್ಲ, ನಮ್ಮ ರಾಜ್ಯದ ಜನತೆ ಕೊಟ್ಟಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ : ರಾಜಕೀಯವಾಗಿ ಯಾರಿಗೆ ಯಾವ ಸರ್ಟಿಫಿಕೇಟ್ ಕೂಡ ಬೇಕಾಗಿಲ್ಲ, ಆದರೆ ಒಬ್ಬರು ಮಾತನಾಡುವುದಕ್ಕೆ ಎದ್ದು ನಿಂತಾದಗ ಮಧ್ಯದಲ್ಲಿ ಎದ್ದುನಿಂತು ಮಾತನಾಡತಕ್ಕಂತಹ ಸಂಸದೀಯ ಪರಂಪರೆ ಇದೇ ಒಂದು ಪರಂಪರೆ ಎಂದು ತಾವು ಇಟ್ಟು ಕೊಳ್ಳಬೇಕಾದರೆ ನಮ್ಮದು ಏನೂ ಅಡ್ಡಿ ಇಲ್ಲ, ಇದು ಸದನಕ್ಕೆ ಬಿಟ್ಟಿದ್ದುದು ಇದು ಜನತೆ ತೀರ್ಮಾನ ಮಾಡುತ್ತಾರೆ. ಯಾವ ರೀತಿ ಸಂಸದೀಯ ಸದನದಲ್ಲಿ ಕೆಲಸ ಮಾಡುತ್ತಿದ್ದಾರೆ. ವರ್ತನೆ ಮಾಡುತ್ತಿದ್ದಾರೆ ಎಂದು . ಪ್ರಶ್ನೆ ಏನೆಂದರೆ ಮಾನ್ಯ ಯಡಿಯೂರಪ್ಪನವರ ಮೇಲೆ ರಿಫ್ಲೆಕ್ಷನ್ ಮಾಡಬೇಕೆಂದು ನಾವು ಹೇಳಲಿಲ್ಲ, ಆದರೆ ಪ್ರಶ್ನೆ ಏನೆಂದರೆ ತಾವು ಬಹುಶಃ you may have your own grievances, But you should understand ಕಾಂಗ್ರೆಸ್ ಪಕ್ಷ ಒಂದು ನ್ಯಾಷನಲ್ ಪಾರ್ಟಿ. ಬಿ.ಜೆ.ಪಿ. ಕೂಡ ಒಂದು ನ್ಯಾಷನಲ್ ಪಾರ್ಟಿ ತಾವು ಸಂಖ್ಯೆಯಲ್ಲಿ ವಿರೋಧ ಪಕ್ಷದ ನಾಯಕರಾಗಿದ್ದೀರಿ, ಆದರೆ ತಾವು ತಿಳಿದುಕೊಳ್ಳ ಬೇಕಾಗುತ್ತದೆ. ನಿಮ್ಮದು 17 ಪರ್ಸೆಂಟ್ ಓಟು. ನೆಮ್ಮದಿ 29 ಪರ್ಸೆಂಟ್ ಓಟು, ಇದನ್ನು ತಿಳಿದುಕೊಳ್ಳಿ. ಜನತೆಯ ದೃಷ್ಟಿಯಲ್ಲಿ ವಿರೋಧ ಪಕ್ಷ ಕಾಂಗ್ರೆಸ್ ಹೊರತು ಬಿ.ಜೆ.ಪಿ. ಅಲ್ಲ. ಅದರ ಬಗ್ಗೆ ನಾವು ಚರ್ಚೆ ಮಾಡುತ್ತಿಲ್ಲ.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು : ಇವತ್ತು ಕಾಂಗ್ರೆಸ್‌ಗಿಂತ ದೊಡ್ಡ ಪಾರ್ಟಿ ಆಗತಕ್ಕಂಥದ್ದು ಭಾರತೀಯ ಜನತಾ ಪಕ್ಷ. ಇದನ್ನು ತಾವು ತಿಳಿದುಕೊಳ್ಳಬೇಕು. ಕಾಂಗ್ರೆಸ್ ಪೂರ್ತಿ ಇವತ್ತು ರೀಜನಲ್ ಪಾರ್ಟಿ ಆಗುತ್ತದೆ. ಕಾಂಗ್ರೆಸ್ ಪಾರ್ಟಿಯಲ್ಲಿ ಈಗಾಗಲೇ ನಾಲ್ಕು ಭಾಗ ಆಗಿದೆ ಇದನ್ನು ಮೊಯಿಲಿಯವರು ತಿಳಿದುಕೊಳ್ಳಬೇಕಾಗಿರತಕ್ಕಂಥದ್ದು.

ಅಧ್ಯಕ್ಷರು : ಅವರು ಸದನದ ಅತ್ಯಂತ ಹಿರಿಯ ಸದಸ್ಯರಲ್ಲೊಬ್ಬರು. ಸಭಾ ನಾಯಕರಾಗಿ, ವಿರೋಧ ಪಕ್ಷದ ನಾಯಕರಾಗಿ ಕೆಲಸ ಮಾಡಿದ್ದಾರೆ. ನಾವು ಸಂಸದೀಯ ಕಲಾಪಗಳನ್ನು ನಡೆಸುವಾಗ ಕೊಟ್ಟು ತೆಗೆದುಕೊಳ್ಳುವುದು ಇರುತ್ತದೆ. ಅವರು ಅವರ ಅಭಿಪ್ರಾಯವನ್ನು ವ್ಯಕ್ತ ಮಾಡುವಾಗ ಮಧ್ಯೆ, ಮಧ್ಯೆ, ಆ ರೀತಿ ಎದ್ದು ಅಡಚಣೆ ಮಾಡಿದರೆ ಚೆನ್ನಾಗಿ ಕಾಣುವುದಿಲ್ಲ. ಸದನದ ಅತ್ಯಂತ ಹಿರಿಯ ಸದಸ್ಯರುಗಳು ಯಾರು ಇರುತ್ತಾರೆ. ಅವರು ಈ ಸದನದ ಆಸ್ತಿ. ಅವರು ಯಾವುದೇ ಪಕ್ಷ ಅಥವಾ ಪಂಗಡಕ್ಕೆ ಸೇರಿರಲಿ ಅವರದೇ ಆದ ಅನುಭವ ಸದನದ ಕಲಾಪಗಳಿಗೆ

ಮೆರಗನ್ನು ಕೊಡುತ್ತದೆ. ದಯಮಾಡಿ ಹಿರಿಯ ಸದಸ್ಯರು ಮಾತನಾಡುವಾಗ ಆವೇಶಕ್ಕೆ ಒಳಗಾಗಿ ಪದೇ ಪದೇ ಅಡ್ಡಿ ಉಂಟು ಮಾಡುವುದು ಒಳ್ಳೆಯದು ಅಲ್ಲ. ನಾನು ಎಲ್ಲರಿಗೂ ವಿನಂತಿ ಮಾಡಿ ಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಅಧ್ಯಕ್ಷರೆ, ವಿರೋಧ ಪಕ್ಷದ ನಾಯಕರ ಸ್ಥಾನ-ಮಾನ ಕಡಿಮೆಯಾದರೆ ನಮ್ಮೆಲ್ಲರ ಸ್ಥಾನ ಮಾನ ಕೂಡ ಕಡಿಮೆ ಆಗುತ್ತದೆ. That is why I am referring to that ಬೇರೆ ಯಾವ ವಿಚಾರವೂ ಅಲ್ಲ. ಏಕೆಂದರೆ ಇಲ್ಲಿ ಅವಿಶ್ವಾಸ ನಿರ್ಣಯವನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಅಥವಾ ತಮ್ಮ ಪಕ್ಷ ಇವತ್ತು ತೆಗೆದುಕೊಳ್ಳಬೇಕಾದ್ದು ವಿರೋಧ ಪಕ್ಷದ ಕರ್ತವ್ಯ. ಆ ಕೆಲಸ ನೀವು ಮಾಡಲಿಲ್ಲ. We would have joined you if it is proper ಆದರೆ ಅವಿಶ್ವಾಸ ನಿರ್ಣಯ ತೆಗೆದುಕೊಳ್ಳಬೇಕೆಂದು ತಮ್ಮ ಪಕ್ಷದವರೂ ತಾವು ನಿರ್ಣಯ ಮಾಡಿದ ಮೇಲೆ ನಾವು ಕಾಂಗ್ರೆಸ್ಸಿಗರು ಹಿಂಬಾಲಕರಾಗಿ ನಿಮ್ಮ ಜೊತೆಯಲ್ಲಿ ಹೆಬ್ಬೆಟ್ಟು ಹಾಕಬೇಕಂದು ಹೊರಟರೆ ಅದು ನಾವು ಜವಬ್ದಾರಿಯುತವಾದ ನ್ಯಾಷನಲ್ ಪಾರ್ಟಿಯಾಗಿ ಕೆಲಸ — ಮಾಡುವುದಕ್ಕಾಗುವುದಿಲ್ಲ. ತಾವು ಏನು ಮಾಡಬೇಕಾಗಿತ್ತು, ನಿಜವಾದ ಅವಿಶ್ವಾಸ ನಿರ್ಣಯ ತರಬೇಕಾದರೆ ತಮ್ಮ ವಿಫಲತೆ ವಿಚಾರ ಆಲೋಚನೆ ಮಾಡಬೇಕಾಗುತ್ತದೆ. ಏಕೆಂದರೆ ಇವತ್ತೂ ನಿಜವಾದ ಅವಿಶ್ವಾಸ ನಿರ್ಣಯ ತರಬೇಕೆಂದರೆ ತಾವು ನಮ್ಮ ಜೊತೆಯಲ್ಲಿ ಮಾತನಾಡಿಕೊಂಡು ನಮ್ಮನ್ನು ಕನ್‌ವಿನ್ಸ್ ಮಾಡಿಕೊಂಡು ತಂದಿರಾ? ಇಲ್ಲ, ಎಲ್ಲಾ ನಿರ್ಣಯ ತೆಗೆದುಕೊಂಡು ನಿನ್ನೆ ನಿಮ್ಮ ಸಭೆಗೆ ನಾವು ಬರಬೇಕು. ನಾವು ಅವಿಶ್ವಾಸ ನಿರ್ಣಯ ಫಾಲೋ ಮಾಡಬೇಕೆಂದರೂ ಕಾಂಗ್ರೆಸ್ ಪಕ್ಷ ತಮ್ಮ ಹಿಂಬಾಲಕರಾಗಿ ಅಥವಾ ಯಾವುದೇ ಒಂದು ಪಕ್ಷದ ಹಿಂಬಾಲಕರಾಗಿ ಕೆಲಸ ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ಇವತ್ತು ತಾವು ವಿರೋಧ ಪಕ್ಷದ ನಾಯಕರಾಗಿ. ಒಂದು ಅಧಿಕೃತ ವಿರೋಧ ಪಕ್ಷವಾಗಿ ತಾವು ಮಾಡಬೇಕಾಗಿದ್ದಂತಹ ಜವಬ್ದಾರಿಯನ್ನು ನಿರ್ಣಯ ಮಾಡಿದಿರಿ, ನಿರ್ಣಯ ತೆಗೆದು ಕೊಂಡಿದ್ದೀರಿ. ತಾವು ನಮ್ಮ ನಾಯಕರ ಮೇಲೆ ಶಾಮೀಲಾಗಿದ್ದೀರಿ ಎಂದು ಹೇಳಿದಿರಿ, ಏಕೆಂದರೆ ಅವಿಶ್ವಾಸ ನಿರ್ಣಯಕ್ಕೆ, ನೀವು ಹಾಕಿದಂತಹ ಗೆರೆಗೆಲ್ಲಾ ನಾವು ಹೆಬ್ಬೆಟ್ಟು ಹಾಕಿಕೊಂಡು ಹೋಗುವುದಕ್ಕೆ ನಮ್ಮ ಪಕ್ಷ ಅಷ್ಟು ಹೀನಾಯವಾಗಿ ಬರಲಿಲ್ಲ. ದಯಮಾಡಿ ಯಡಿಯೂರಪ್ಪನವರೇ, ತಾವು ವಿರೋಧ ಪಕ್ಷದ ನಾಯಕರಾಗಿ ನಿಮ್ಮ ಸ್ಥಾನ ಮಾನ ಉಳಿಸಿ, ಘನತೆ ನೀಡಲಿಕ್ಕೆ ನಾವೆಲ್ಲಾ ಒಪ್ಪಿದ್ದೇವೆ, ಆದರೆ ಈ ತರಹ ತಾವು ಏಕ ಪಕ್ಷೀಯವಾಗಿ ಒಂದು ಅವಿಶ್ವಾಸ ನಿರ್ಣಯ ತರಬೇಕೆಂದು ನಿರ್ಣಯ ಮಾಡಿಕೊಂಡು, ಉಳಿದ ಪಕ್ಷದವರೂ ತಮ್ಮ ಹಿಂಬಾಲಕರಾಗಿ ಬರಬೇಕೆಂದು ತಾವು ಆಲೋಚನೆ ಮಾಡಿದ್ದರೆ ಈ ರೀತಿಯಾಗಿ ವಿರೋಧ ಪಕ್ಷಗಳು ಕೆಲಸ ಮಾಡುವುದಕ್ಕಿಕ ಆಗುವುದಿಲ್ಲ. ಏಕೆಂದರೆ ನಾವು ವಿರೋಧ ಪಕ್ಷದವವು ಇದ್ದರೆ ಇದಕ್ಕೆ ಲ್ಯಾಕ್ ಆಫ್ ನಾಲೆಡ್ಜ್ ಮತ್ತೊಂದು, ಇನ್ನೊಂದು ಎಂದು ಹೇಳುವಂತಹ ಒಂದೇ epithet ಪ್ರಶ್ನೆ ಅಲ್ಲ. ಆದರೆ ಅಧ್ಯಕ್ಷರೆ ಇವತ್ತು ಏಕೆ ಸನ್ಯಾಸ ನಂಜೇಗೌಡರು ಮೇಲೆ ನಮ್ಮ ನಾಯಕರು ಹೇಳಿದರು ಎಂದರೆ ಇಲ್ಲಿ ಶಾಮೀಲಾಗಿದ್ದಾರೆ ಎಂದು ಕೇಳಿಬಂತು. ಶಾಮೀಲಾಗಿದ್ದಾರೆ ಎಂದರೆ ಅದಕ್ಕಿಂತ ದೊಡ್ಡ ಗುರುತರವಾದ ಒಂದು ಆಪಾದನೆ ಒಬ್ಬ ಸದಸ್ಯರ ಮೇಲೆ ಮತ್ತೊಂದು ಇಲ್ಲ. ಆದ್ದರಿಂದ ಆ ಪದವನ್ನು ತಾವು ಕಡತದಿಂದ ತೆಗೆದು ಹಾಕಬೇಕಾಗುತ್ತದೆ. ಇದರ ಘನತೆಗೂ ಕುಂದು ಉಂಟಾಗುತ್ತದೆ.

ಅಧ್ಯಕ್ಷರು : ಇನ್ನೂ ಅನೇಕ ಪದಗಳು ಇಲ್ಲಿ ಚಲಾವಣೆ ಆದಹಾಗೆ ನನಗೆ ಗೋಚರವಾಗುತ್ತದೆ. ಆನಂತರ ಕಡತಗಳನ್ನು ತರಿಸಿ ಯಾವ್ಯಾವ ಪದಗಳು ಆಕ್ಷೇಪಾರ್ಹವಾಗಿದೆ ಅದೆಲ್ಲವನ್ನೂ ತೆಗೆಸುತ್ತೇನೆ. ಅದೊಂದೇ ಅಲ್ಲ ಉಳಿದವನ್ನು ತೆಗೆಯುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಹಿರಿಯ ಮಾಜಿ ಸಚಿವರಾದಂತಹ ವೀರಪ್ಪ ಮೊಯಿಲಿಯವರು ಕೆಲವು ಸಂಗತಿಗಳನ್ನು ಹೇಳಿದರು.

ಅಧ್ಯಕ್ಷರು : ಮುಖ್ಯ ಮಂತ್ರಿಗಳು

ಶ್ರೀ ಬಿ.ಎಸ್. ಯಡಿಯೂರಪ್ಪ : ದಯಾಮಾಡಿ ಕ್ಷಮಿಸಿ. ಆ ಉದ್ದೇಶ ನನ್ನದಲ್ಲ.

ಅಧ್ಯಕ್ಷರು : ಹಾಗೆ ನೀವು ಬಾಯಿ ತಪ್ಪಿ ವಾಟಾಳರ ವಿಚಾರಕ್ಕೆ ಮಾಜಿ ಮುಖ್ಯಮಂತ್ರಿಗಳಲು ಎಂದು ಹೇಳಿ ನೋಡೋಣ ಅದನ್ನು ಹೇಳುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ತಮಗೆ ಹಾಸ್ಯ ಇರಬಹುದು. ನಾನು ಯಾವಾತ್ತಾದರೂ ಮುಖ್ಯ ಮಂತ್ರಿಯಾಗುತ್ತೇನೆ. ನೀವೇನೂ ಅನುಮಾನ ಪಡಬೇಡಿ. ನೀವು ಅಷ್ಟು ಲಘುವಾಗಿ ತೀರ್ಮಾನ ಮಾಡುವುದಕ್ಕೆ ಹೋಗಬೇಡಿ. ಈ ರಾಜ್ಯದ ನಾಲ್ಕು ಕೋಟಿ ಕನ್ನಡಿಗರು ಒಂದಲ್ಲ ಒಂದು ದಿನ ನನಗೆ ಮುಖ್ಯಮಂತ್ರಿಯಾಗಿ ಮಾಡುತ್ತಾರೆ, ಎನ್ನುವ ನಂಬಿಕೆ ನನಗೆ ಇದೆ.

ಇನ್ನೊಂದು ವಿಚಾರವನ್ನು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಅದೆನೆಂದರೆ ನಾವೇ ನಿಜವಾದ ವಿರೋದಪಕ್ಷ. ಇವರು ಅಲ್ಲ, ಅವರು ಅಲ್ಲ. ಇವರಲ್ಲಾ ಅಧಿಕಾರದಲ್ಲಿದ್ದವರು, ನಾವು ನಿಜವಾದ ವಿರೋಧ ಪಕ್ಷ ಅದನ್ನು ತಾವು ಗಮನದಲ್ಲಿಟ್ಟುಕೊಳ್ಳಬೇಕು.

ಅಧ್ಯಕ್ಷರು : ನೀವು ಮುಖ್ಯಮಂತ್ರಿಗಳಾದರೆ ನನ್ನ ಪರಿಸ್ಥಿತಿ ಏನು?

ಶ್ರೀ ವಾಟಾಳ್ ನಾಗರಾಜ್ : ಅದನ್ನು ನಾವು ನೀವು ಕುಳಿತು ಯೋಚನೆ ಮಾಡೋಣ ಬಿಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ವೀರಪ್ಪಮೊಯಿಲಿಯವರು ತುಂಬಾ ಗಂಭೀರವಾಗಿ, ವಿರೋಧಪಕ್ಷದ ನಾಯಕರ ಜವಾಬ್ದಾರಿ ಏನು ಎನ್ನುವುದನ್ನು ತಿಳಿಸಿದ್ದಾರೆ. ನಿಜವಾಗಿಯೂ ಕೆಲವು ಸಂಗತಿಗಳಲ್ಲಿ ನಾನು ಗಮನಿಸಬೇಕಾದಂತಹ ವಿಚಾರಗನ್ನು ಅವರು ಹೇಳಿದ್ದಾರೆ. ನಾನು ಯಾವ ರೀತಿ ಈ ರಾಜ್ಯ ಮಾನ್ಯ ಮುಖ್ಯಮಂತ್ರಿಗಳ ಕಡೆ ಕೈ ತೋರಿಸಿ. ನೀವು ಪಕ್ಷಕಷ್ಟೇ ಮುಖ್ಯಮಂತ್ರಿಯಲ್ಲ. ಇಡೀ ರಾಜ್ಯಕ್ಕೆ ಮುಖ್ಯಮಂತ್ರಿಗಳು ಎಂದು ಏನು ಹೇಳಿದ್ದೇನೋ ಅದೇ ರೀತಿ ವಿರೋಧಪಕ್ಷದ ನಾಯಕನಾಗಿ ಒಂದ ಪಕ್ಷದಿಂದ ಬಹು ಸಂಖ್ಯಾ ಬಲದಿಂದ ಇದ್ದರೂ ಸಹ, ಇಡೀ ಈ ಕಡೆಯಿಂದ ಒಬ್ಬ ಅಧಿಕೃತವಾಗಿ ವಿರೋಧಪಕ್ಷದ ನಾಯಕನಾಗಿ ಕೆಲಸ ಮಾಡಬೇಕಾಗುತ್ತದೆಯ ಅವರೆಲ್ಲರ ವಿಶ್ವಾಸವನ್ನು ತೆಗೆದುಕೊಂಡು, ಜನರ ಹಿತದೃಷ್ಟಿಯಿಂದ ನಾವೆಲ್ಲಾ ಒಂದಾಗಿ ಕೆಲಸ ಮಾಡಬೇಕಾಗುತ್ತದೆ ಎನ್ನುವಂತಹ ಸಲಹೆಯನ್ನು ಇವರು ಏನು ಕೊಟ್ಟರು ಅದು ನಿಜವಾಗಿಯೂ ಈ ಪ್ರಜಾತಂತ್ರದ ವ್ಯವಸ್ಥೆಯನ್ನು ವಿರೋಧ ಪಕ್ಷದ ನಿಜವಾದಂತಹ ಪ್ರಾತ್ರವೇ ಅದು. ಈಗ ಅಧಿಕೃತ ವಿರೋಧಪಕ್ಷದ ಪಾತ್ರ ನನ್ನದು. ಆ ದಿಕ್ಕಿನಲ್ಲಿ ನಾನು ಏನು ಪ್ರಾಮಾಣಿಕ ಪ್ರಯತ್ನ ಮಾಡಿದ್ದೇನೆ ಎಂದರೆ ಈ ರೀತಿ ಕೆಲಸ ಆಗಬೇಕು, ಜನ ಒಂದು ಬದಲಾವಣೆಯನ್ನು ನಿರೀಕ್ಷೆ ಮಾಡಿದ್ದೇನೆ ಎಂದರೆ ಈ ರೀತಿ ಕೆಲಸ ಆಗಬೇಕು, ಜನ ಒಂದು ಬದಲಾವಣೆಯನ್ನು ನಿರೀಕ್ಷೇ ಮಾಡುತ್ತಿರುವಂತಹ ಈ ಕಾಲದಲ್ಲಿ ಆಡಳಿತ ಪಕ್ಷದಿಂದ ಒಳ್ಳೆಯ ಕೆಲಸ ಆಗುವಂತೆ ನೋಡಿಕೊಂಡು. ಆಡಳುತ ಪಕ್ಷ ತಪ್ಪು ದಾರಿ ಹಿಡಿಯದಂತೆ ನೋಡಿಕೊಳ್ಳಬೇಕು ಎನ್ನುವ ದೃಷ್ಟಿಯಿಂದ ನಾನು ವಿರೋಧ ಪಕ್ಷದ ನಾಯಕರ ಎಂದು ನನ್ನ ಕೊಠಡಿಯಲ್ಲಿ ಕುಳಿತು ಕೊಳ್ಳದೆ ವಿಧಾನ ಪರಿಷತ್ತಿನ ಕಾಂಗ್ರೆಸ್ಸಿನ ವಿರೋಧ ಪಕ್ಷದ ನಾಯಕರ ಕೊಠಡಿಗೆ ಹೋಗಿ, ಈ ತರಹದ ವಿಷಯಗಳು ಬಂದಾಗ ನಾವೆಲ್ಲಾ ಒಟ್ಟಿಗೆ ಕುಳಿತುಕೊಂಡು ಕೆಲಸ ಮಾಡೋಣ ಎಂದು ಹೇಳಿದ್ದೇವೆ. ಅಲ್ಲಗೆ ಮಾನ್ಯ ಖರ್ಗೆಯವರು ಹಾಗೂ ಮಾನ್ಯ ವೀರಪ್ಪ ಮೊಯಿಲಿಯವರು ಬಂದಿದ್ದಾರೆ ಮಾನ್ಯ

ಅಧ್ಯಕ್ಷರೆ, ನಾವೆಲ್ಲಾ ಕುಳಿತುಕೊಂಡು ಮಾತನಾಡಿದ್ದೇವೆ. ಅವಿಶ್ವಾಸ ನಿರ್ಣಯವನ್ನು ಮಂಡಿಸಬೇಕು ಎನ್ನುವ ವಿಚಾರದಲ್ಲಿ ನಾವು ಬಹಳ ಎಚ್ಚರಿಕೆಯಿಂದ ಈ ರೀತಿ ಅವಿಶ್ವಾಸ ನಿರ್ಣಯದ ಬಗ್ಗೆ ತೀರ್ಮಾನ ತೆಗೆದುಕೊಂಡಿರುವಂತಹ ಕಾಲದಲ್ಲಿ ಈ ಕಡೆ ಇರುವಂತಹ ಎಲ್ಲಾ ವಿರೋಧಪಕ್ಷದವರನ್ನು ನಿನ್ನೆ ಬೆಳಗ್ಗೆ ಎಂಟೂವರೆ ಗಂಟೆಗೆ ನನ್ನ ಕೊಠಡಿಗೆ ಕರೆದು ಮಾತನಾಡಿ ಅವರೆಲ್ಲರ ಸಲಹೆಗಳನ್ನು ತೆಗೆದುಕೊಂಡು ನಂತರ ನೋಟೀಸ್ ಕಳುಹಿಸಬೇಕು ಎಂದು ಯೋಜನೆ ಮಾಡಿದ್ದೆ. ಅದರ ಬಗ್ಗೆ ನಾನು ಎಲ್ಲಾ ಪ್ರಯತ್ನವನ್ನೂ ಸಹ ಮಾಡಿದ್ದೇನೆ. ಆದುದರಿಂದ ಮಾನ್ಯ ವೀರಪ್ಪಮೊಯಿಲಿಯವರು ಸಲಹೆ ಏನು ಇದೆ ಅದೇ ರೀತಿ ಒಂದು ಸ್ವಲ್ಪವೂ ಕೊರತೆಯಾಗದ ಹಾಗೆ ನಾನು ವಿರೋಧ ಪಕ್ಷದ ನಾಯಕರನಾಗಿ ಈ ಸ್ಥಾನದಲ್ಲಿ ನಿಂತುಕೊಂಡು, ಇಲ್ಲಿ ಅನೇಕ ಜನ ಹಿರಿಯರು ಯಾವ ಒಂದು ಸತ್‌ಸಂಪ್ರದಾಯಗಳನ್ನು ಎತ್ತಿ ಹಿಡಿದು ಕೆಲಸ ಮಾಡಿಕೊಂಡು ಬಂದಿದ್ದಾರೆ ಆ ದಿಕ್ಕಿನಲ್ಲೇ ಕೆಲಸ ಮಾಡಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ. ಆ ಮಟ್ಟಕ್ಕೆ ನಾನು ಇಲ್ಲದೇ ಇದ್ದರೂ ಸಹ ಆ ಮಟ್ಟಕ್ಕೆ ಏರುವುದಕ್ಕೆ ಪ್ರಯತ್ನವನ್ನಂತೂ ಮಾಡುತ್ತೇನೆ, ನಾನು ಎಲ್ಲರಿಂಗಿತ ದೊಡ್ಡವನಲ್ಲ, ಇನ್ನು ಅನೇಕ ವಿಷಯಗಳನ್ನು ಕಲಿಯುವುದಿದೆ. ಈ ಸ್ಥಾನಕ್ಕೆ ಬಂದತಕ್ಷಣ ನಾವೆಲ್ಲಾ ಸರ್ವಗುಣ ಸಂಪನ್ನರು ಎಂದು ಹೇಳುವುದಕ್ಕಾಗುವುದಿಲ್ಲ, ಯಾವುದೇ ಕೊರತೆ ಇರುವುದಿಲ್ಲ ಎಂದು ಹೇಳುವುದಕ್ಕಾಗುವುದಿಲ್ಲ, ಆ ಮಟ್ಟಕ್ಕೆ ಏರುಬೇಕಾಗುತ್ತದೆ. ಅನೇಕ ಜನ ಇಲ್ಲಿ ಈ ಸ್ಥಾನದಲ್ಲಿ ನಿಂತುಕೊಂಡು ಪ್ರಭಾವಿಯಾಗಿ ಕೆಲಸ ಮಾಡಿದ್ದಾರೆ. ನಾವು ತಿಳಿದುಕೊಳ್ಳುವಂತಹ ಸಂಗತಿಗಳು ಇನ್ನು ಬಹಳ ಇದೆ. ಆ ದಿಕ್ಕಿನಲ್ಲಿ ನಾನು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆಂದು ಹೇಳುತ್ತಾ ಇವತ್ತು ಮಾನ್ಯ ವೀರಪ್ಪಮೊಯಿಲಿಯವರಿಗೆ ನಾನು ಒಂದು ಮಾತು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಈಗಲಾದರೂ ಯಾರೇ ನೋಟೀಸ್ ಕೊಟ್ಟರೂ ಸಹ ಈ ಒಂದು ಪ್ರಜಾತಂತ್ರದ ವ್ಯವಸ್ಥೆಯಲ್ಲಿ ನಾವು ಅಧಿಕೃತ ವಿರೋಧಪಕ್ಷವಾಗಿ ನೋಟೀಸ್ ಕಳುಹಿಸಿದರೂ ಸಹ ನಾವೆಲ್ಲರೂ ಸೇರಿ ಇಲ್ಲಿ ಕೆಲಸ ಮಾಡಬೇಕಾಗುತ್ತದೆ. ಎಲ್ಲರೂ ಅಧಿಕೃತ ವಿರೋಧಪಕ್ಷವಾಗಿ ಒಟ್ಟಿಗೆ ಸೇರಿ ಅವಿಶ್ವಾಸ ನಿರ್ಣಯವನ್ನು ಮೂವ್ ಮಾಡೋಣ ಎಂದು ಸಲಹೆ ಕೊಟ್ಟಿದ್ದೆ. ಅದು ಬೇರೆ ಕಾರಣ ಇರಬಹುದು. ಅವರು ಅವರ ಅಸ್ತಿತ್ವವನ್ನು ಉಳಿಸಿಕೊಳ್ಳಬೇಕಾಗುತ್ತದೆ. ಕಾಂಗ್ರೆಸ್ಸನ್ನು ನಮ್ಮ ಸ್ನೇಹಿತರು ಅಖಿಲಭಾರತ ಒಂದು ಪಕ್ಷವಾಗಿ ಇತ್ತೀಚಿನ ದಿನಗಳಲ್ಲಿ ಪಕ್ಷಕ್ಕೆ ಹೊಡೆತದ ಮೇಲೆ ಹೊಡೆತ ಬಿಳುತ್ತಿರುವಂತಹ ಕಾಲದಲ್ಲಿ ಅಸರ್ಟಿ ಮಾಡಿಕೊಳ್ಳಬೇಕಾಗುತ್ತದೆ. ಆ ದಿಕ್ಕಿನಲ್ಲಿ ಪ್ರಯತ್ನ ಮಾಡುವುದೇನು ತಪ್ಪಲ್ಲ, ಅದನ್ನು ನಾನು ತಪ್ಪು ಎಂದು ಹೇಳುವುದಕ್ಕೆ ಇಷ್ಟಪಡುವುದಿಲ್ಲ, ಆದುದರಿಂದ ಸಾನ್ನಾನ್ಯ ಅಧ್ಯಕ್ಷರೆ, ಮಾನ್ಯ ನಂಜೇಗೌಡರು ಮಾತನಾಡುವಂತಹ ಕಾಲದಲ್ಲಿ ನಮ್ಮ ಮಾನ್ಯ ಖಿರ್ಗೆಯವರು ಇದನ್ನು ಪ್ರಸ್ತಾಪ ಮಾಡದೆ ಇದ್ದರೆ ಈ ಪರಿಸ್ಥಿತಿ ಬರುತ್ತಿರಲಿಲ್ಲ ಮಾನ್ಯ ವೀರಪ್ಪ ಮೊಯಿಲಿಯವರು ಪಕ್ಷದ ಬಲವನ್ನು ಪರ್ಸೆಂಟೇಜ್‌ವೈಸ್ ಹೇಳಿದರು ಈ ದೇಶದಲ್ಲಿ ಏನಾಗಿದೆ ಎಂದರೆ ಈ ದೇಶವನ್ನು ಆಳಿದಂತಹ ಕಾಂಗ್ರೆಸ್ ಪಕ್ಷ ದಿನದಿಂದ ದಿನಕ್ಕೆ ರೀಜನಲ್ ಪಾರ್ಟಿಯಾಗುತ್ತದೆ. ಅನೇಕ ರಾಜ್ಯಗಳನ್ನು ಕಳೆದುಕೊಂಡು ಹೋಗುತ್ತಿದೆ. ಮಾಜಿ ಮುಖ್ಯಮಂತ್ರಿಗಳಾದಂತಹ ಸನ್ಯಾನ್ಯ ರಾಮಕೃಷ್ಣ ಹೆಗಡೆಯವರು ಮುಂದಿನ ಭವಿಷ್ಯದ ದೃಷ್ಟಿಯಿಂದ ಕೇಂದ್ರದಲ್ಲಿ ವೀರಪ್ಪ ಮೊಯಿಲಿಯವರು ರಾಮಕೃಷ್ಣ ಹೆಗಡೆಯವರಿಗೆ ಬನ್ನಿ ನಾವೆಲ್ಲ ಒಂದಾಗೋಣ ಎಂದು ಕರೆಕೊಟ್ಟಿದ್ದಾರೆ. ಬಿ.ಜೆ.ಪಿ. ಅಧಿಕಾರಕ್ಕೆ ಬಂದುಬಿಡುತ್ತಾ ನಾವೆಲ್ಲಾ ಒಂದಾಗೋಣ ಎಂದು ಹೇಳಿದ್ದಕ್ಕೆ ಜಾಫರ್ ಷರೀಫ್ ಅವರು ಕರೆಕೊಟ್ಟಿದ್ದಾರೆ ಅವರ ಪರಿಸ್ಥಿತಿ ನಮಗೆ ಅರ್ಥವಾಗುತ್ತದೆ.

(ಮುಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಎಲ್ಲ ಮುಂದಾಗಿ ಹೋಗೋಣ ಎನ್ನುವ ಮಾತನ್ನು ಹೇಳುವುದಕ್ಕೆ ಇಚ್ಛಿಪಡುತ್ತೇನೆ.

(ಗೊಂದಲ)

ಶ್ರೀಜೆ.ವಿ ಶ್ರೀರಾಮರೆಡ್ಡಿ : ನೀವಂತೂ ಶಾಶ್ವತವಾಗಿ ಬರುವುದಿಲ್ಲ. ನಿಮ್ಮನ್ನು ಬರುವುದಿಲ್ಲ. ಅಧ್ಯಕ್ಷರೇ, ವಿರೋಧಪಕ್ಷದವರಾಗಿ ಇವರು ಈ ರೀತಿಯಾಗಿ ಬೇಜವಾಬ್ದಾರಿಯಾಗಿ ಮಾತನಾಡಬಾರದು. ಇವರು ಯಾರು ಸಿ.ಪಿ.ಐ.(ಎಂ) ಅಧಿಕಾರಕ್ಕೆ ಬರುವುದಿಲ್ಲ ಎಂದು ಹೇಳುವುದಕ್ಕೆ ಇವರು ಅಧಿಕಾರಕ್ಕೆ ಬರುವುದೇ ಇಲ್ಲ. ಈ ದೇಶದ ಜನ ಇವರನ್ನು ಬರುವುದಕ್ಕೆ ಬಿಡುವುದು ಇಲ್ಲ.

(ಗೊಂದಲ)

ಅಧ್ಯಕ್ಷರು : ಇವರು ಮಾರ್ಕಿಸಸ್ಟ್ ಪಕ್ಷದ ಒಬ್ಬರೆ ಸದಸ್ಯರು.

ಶ್ರೀ . ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ ಈ ವಿಷಯದ ಬಗ್ಗೆ

ವಿರೋಧಪಕ್ಷದ ನಾಯಕರು ಎಲ್ಲಾ ವಿರೋಧ ಪಕ್ಷಗಳ ಸಭೆ ಕರೆಯಬೇಕು ಎಂದು ಹೇಳಿ ಇಲ್ಲಿ ಚರ್ಚೆ ಮಾಡತಕ್ಕಂಥಾ ಅವಶ್ಯಕತೆ ಇಲ್ಲ. ಅದು ಸದನದ ಆಚೆ ಚರ್ಚೆಯಾಗಬೇಕು. ಅವರನ್ನು ಕರೆಯಬೇಕಾಗಿತ್ತು, ನಾವು ಹೋಗಬೇಕಾಗಿತ್ತು, ಬಿಡಬೇಕಿಗಿತ್ತು ಅದೆಲ್ಲಾ ಹೊರಗಡೆ ಚರ್ಚೆಯಾಗಬೇಕು. ಅವರು ಕರೆದರೂ ನಾವು ಹೋಗಬೇಕು ಎಂದು ಏನಿಲ್ಲ. ಅವರನ್ನು ಏಕೆ ಕರೆಯಲಿಲ್ಲ. ಎಂದು ಇಲ್ಲಿ ಚರ್ಚೆ ಮಾಡಿದರೆ, ನಾವು ಅವರಿಗೆ ಪ್ರಾಧ್ಯಾನ್ಯತೆ ಕೊಟ್ಟಹಾಗೆ ಆಗುತ್ತೆ . ನಾವೆಲ್ಲರೂ ಅವರ ಹಿಂದೆ ಇದ್ದೇವೆ ಎಂದು ಹೇಳಿದಹಾಗೆ ಆಗುತ್ತದೆ. ಇನ್ನು ಎರಡನೆಯ ಅಂಶ, ಮಾನ್ಯ ಖರ್ಗೆಯವರು ಹಾಗೂ ಮೊಯಿಲಿಯವರು ಪ್ರಸ್ತಾಪ ಮಾಡಿದಹಾಗೆ

ಈ ಸದನವನ್ನು ಕರೆದಂತಹ ಮೊದಲನೆ ಉದ್ದೇಶ ಬರಗಾಲದ ಬಗ್ಗೆ ಚರ್ಚೆ ಮಾಡಬೇಕು ಎಂದು.ಈ ರಾಜ್ಯದ ಜನತೆಯ ಹಿತದೃಷ್ಟಿ ಮಾನ್ಯ ವಿರೋಧಪಕ್ಷದವರಿಗೆ ಇದ್ದಿದ್ದರೆ ಜನರ ಸಮಸ್ಯೆಯನ್ನು ಬಿಟ್ಟು, ವಿಷಯವನ್ನು ಬೇರೆ ಕಡೆಗೆ ತಿರುಗಿಸಲಿಕ್ಕೆ ವಿರೋಧ ಮುಖಂಡರಿ ಅವಿಶ್ವಾಸ ನಿರ್ಣಯವನ್ನು ತಂದಿದ್ದಾರೆ ಎಂದು ಸ್ಪಷ್ಟವಾಗಿ ಗೊತ್ತಾಗ್ತಿದೆ. ಅವರಿಗೆ ರಾಜ್ಯದ ಜನರ ಹಿತದೃಷ್ಟಿ ಇಲ್ಲ.

ಅಧ್ಯಕ್ಷರು : ಇಲ್ಲಿ ಆರೋಪಗಳು ಬೇಡ.

ಶ್ರೀ ಹೆಚ್.ಎನ್. ನಂಜೆಗೌಡ : ಮಾನ್ಯ ವಾಟಾಳ್ ನಾಗರಾಜ್‌ರವರು ಈ ಜನ್ಮದಲ್ಲಿ ಅಲ್ಲದೆ ಇದ್ದರೂ ಮುಂದಿ ಜನ್ಮದಲ್ಲಾದರೂ ಈ ರಾಜ್ಯದ ಮುಖ್ಯಮಂತ್ರಿಗಳಾಗಲಿ ಎಂದು ನಾನು ಹಾರೈಸುತ್ತೇನೆ.

ಶ್ರೀ ವಾಟಾಳ್‌ನಾಗರಾಜ್: ನಾನು ಇದೇ ಜನ್ಮದಲ್ಲಿ ಮುಖ್ಯಮಂತ್ರಿಯಾಗಿಯೇ ಆಗುತ್ತೇನೆ. ನೀವು ಬದುಕಿರುವಾಗಲೇ ನೋಡುತ್ತೀರಿ. ಮತ್ತು ಅದಕ್ಕೆ ನಿಮ್ಮ ಸಂಪೂರ್ಣ ಬೆಂಬಲ ನನಗೆ ಇದೆ ಎಂದು ನಾನು ಅಂದುಕೊಂಡಿದ್ದೇನೆ.

ಶ್ರೀ ಖಮರಲ್‌ಇಸ್ಲಾಂ: ಮಾನ್ಯ ಶ್ರೀ ವಾಟಾಳ್‌ನಾಗರಾಜ್‌ರವರು ಮುಖ್ಯ ಮಂತ್ರಿಗಳಾದರೆ ನಾನು ಉಪಮುಖ್ಯಮಂತ್ರಿಯಾಗಲೇ ಬೇಕು.

ಅಧ್ಯಕ್ಷರು : ವಾಟಾಳ್ ನಾಗರಾಜ್‌ಮುಖ್ಯಮಂತ್ರಿ, ಖಮರಲ್ ಇಸ್ಲಾಂ ಉಪಮುಖ್ಯಮಂತ್ರಿ ಆದರೆ ಕನ್ನಡ ಪೂರ್ತಿಯಾದ ಹಾಗೆ ಆಯಿತು.

ಶ್ರಿ ವಾಟಾಳ್ ನಾಗರಾಜ್: ತಾವು ಇದನ್ನು ಲಘುವಾಗಿ ತೆಗೆದುಕೊಳ್ಳತಕ್ಕಂಥ ಹಾಗೂ ನಗತಕ್ಕಂಥ ವಿಷಯವಲ್ಲ. ಏದರೆ, ಕನ್ನಡ ಬಾರದೇ ಇರತಕ್ಕಂಥ ಕನ್ನಡ

ಅಭಿಮಾನಿಗಳನ್ನು ನಮ್ಮ ಸಚಿವ ಸಂಪುಟದಲ್ಲಿ ತೆಗೆದುಕೊಂಡು ಕನ್ನಡದ ಬಗ್ಗೆ ಪ್ರೀತಿ ವಿಶ್ವಾಸ ಹುಟ್ಟಿಸ ತಕ್ಕಂಥ ವ್ಯವಸ್ಥೆ ಇದೆಯಲ್ಲ ಅದನ್ನು ನಾವು ಒಪ್ಪಲೇಬೇಕು. ಅವರು ಆದ ತಕ್ಷಣ ಕನ್ನಡ ಏನೋ ಆಗುತ್ತದೆ ಎನ್ನುವುದಲ್ಲ. ಅವರು ಕನ್ನಡ ವಿರೋಧಿಗಳೇನಲ್ಲ. ಅವರು ಕನ್ನಡವನ್ನು ಸಂಪೂರ್ಣವಾಗಿ ಮಾತನಾಡತಕ್ಕಂಥ ವ್ಯವಸ್ಥೆಗೆ ಬಂದಿದ್ದಾರೆ. ಕನ್ನಡವನ್ನು ಕಲಿಯಬೇಕು ಎಂದು ಆಸಕ್ತಿ ಇಟ್ಟುಕೊಂಡಿದ್ದಾರೆ. ಮುಂದಿನ ಸಭೆಯಲ್ಲಿ ಅವರು ಕನ್ನಡದಲ್ಲಿ ಮಾತನಾಡುತ್ತಾರೆ. ಆ ಭರವಸೆಯನ್ನು ನಾನು ತಮಗೆ ಕೊಡುತ್ತೇನೆ.

ಶ್ರೀ ಹೆಚ್.ಎನ್. ನಂಜೇಗೌಡ : ಸಭೆಯಲ್ಲಿ ಕೆಲವು ಮನಸ್ಸಿಗೆ ಖಾರವಾಕದಂತಹ ವಿಚಾರಗಳು ಬಂದವು. ಬಹುಶಃ ಮಾನ್ಯ ಜೆ. ಹೆಚ್. ಪಟೇಲ್‌ರವರಿಗೆ ನೆನಪಿರಬೇಕು.ಬ್ರಿಟಿಷ್ ಪಾರ್ಲಿಮೆಂಟ್‌ನಲ್ಲಿ ಒಂದು ಸಾರಿ ಏನು ಆಯಿತು ಎಂದರೆ ಪ್ರಧಾನ ಮಂತ್ರಿಗಳು ವಿರೋಧ ಪಕ್ಷದ ನಾಯಕರನ್ನು ಜನ ನಿಮ್ಮನ್ನು ನೇಣು ಹಾಕುತ್ತಾರೆ, ನಿಮಗೆ ಏಕ್ಸ ಬಂದುಬಿಡುತ್ತದೆ. "People will hang you and you will get AIDS for your allegationhs."

ಎಂದು ಬೊಬ್ಬೆ ಹೊಡೆಯುತ್ತಾರೆ. ಅದಕ್ಕೆ ಅವರು ಕಾಮ್ ಆಗಿ ಎದ್ದು ಏನು ಹೇಳುತ್ತಾರಂದರೆ. " It all depends on two things. When should I embrace? If I embrace your Party, people will hang me. If I embrace your wife, I will get AIDS"

ಅಧ್ಯಕ್ಷರು : ಆಗ ಏಡ್ ಇರಲಿಲ್ಲ.

ಶ್ರೀ ನಂಜೇಗೌಡ : ಆಗ ಸಿಫಿಲಿಸ್ I stand corrected.

ಶ್ರೀ ವಾಟಾಳ್ ನಾಗರಾಜ್ : ಇದರ ಬಗ್ಗೆ ಮಾನ್ಯ ನಂಜೇಗೌಡರು ಹಾಗೂ ಪಟೇಲರು ಬಹಳ ಚೆನ್ನಾಗಿ ವ್ಯಾಖ್ಯಾನ ಮಾಡುತ್ತಾರೆ. ಇದರ ಬಗ್ಗೆ ಪ್ರಾಮುಖ್ಯವಾಗಿ ಅನುಭವ ವಿಚಾರಗಳನ್ನು ಅವರು ಹೇಳುತ್ತಾರೆ.

ಅವರ ಬಗ್ಗೆ ಇವರಿಗೆ ಬಹಳ ಆತ್ಯಂತ ಪ್ರೀತಿ ವಿಶ್ವಾಸ ಇದೆ. ಇಂತಹ

ವಿಚಾರಗಳನ್ನು ಕೇಳಬೇಕು ಎಂದರೆ ಅವರ ಬಾಯಿಯಲ್ಲೇ ಕೇಳಬೇಕು. ಹಾಗೂ ನಾವೆಲ್ಲಾ ಧನ್ಯರಾಗಬೇಕು.

ಶ್ರೀ ಮತಿ ಲೀಲಾದೇವಿ ಆರ್. ಪ್ರಸಾದ್: ಸನ್ಮಾ ಸದಸ್ಯರು ಗಂಭೀರವಾದಂತಹ ಖಾಯಿಲೆ ಬಗ್ಗೆ ಹೆಸರು ಹೇಳುವಾಗ ಬರದೇ ಇರತಕ್ಕಂಥ ವಿಷಯಗಳಲ್ಲಿನ ಅರ್ಥ ಇಲ್ಲದೆ ಲಘುವಾಗಿ ಮಾತನಾಡುವುದು ಒಳ್ಳೆಯದಲ್ಲ. ಅಧ್ಯಕ್ಷರೆ ಲಘುವಾಗಿ ಮಾತನಾಡುವುದಕ್ಕೆ ಬಿಡಬಾರದು.

ಅಧ್ಯಕ್ಷರು : ಖಾಯಿಲೆ ಹೆಸರು ಬರುವುದಿಲ್ಲ ಎಂದು ಅಲ್ಲ. ಏಡ್ಸ ಈಗ ನಮ್ಮ ಸ್ವಯಾರ್ಜಿತ. ಸಿಫಿಲೆಸ್‌ಖಾಯಿಲೆ ಹಳಬರ, ಎಂದರೆ ಹಿಂದಿನ ಖಾಯಿಲೆ. ಅವರು ಈ ಕಾಲದವರಾದ್ದರಿಂದ ಆ ರೀತಿ ಹೇಳಿದ್ದಾರೆ

ಶ್ರೀ ವಾಟಾಳ್‌ನಾಗರಾಜ್ :ನಾನು ಮತ್ತು ಮಾನ್ಯ ನಂಜೇಗೌಡರು ಬಹಳ ಸ್ನೇಹಿತರು. ಅದರೆ ಪಟೇಲ್‌ರವರ ಬಗ್ಗೆ ಅಷ್ಟೇ ಸ್ನೇಹ ಹಾಗೂ ಗೌರವ ಇದೆ. ಇವರಿಬ್ಬರದು ಕೆಲವು ವಿಷಯಗಳಲ್ಲಿ ಒಂದೇ ವಿಚಾರ ಇರುತ್ತದೆ. ಇವರಿಬ್ಬರ ವಿಚಾರಧಾರೆಗಳು ಒಂದೇ ಆಗಿರುತ್ತದೆ. ವಿಚಾರದಾರೆಯಲ್ಲಿಸಮಾನ ಮನಸ್ಕರಾಗಿದ್ದಾರೆ. ಮಾನ್ಯ ನಂಜೇಗೌಡರಲ್ಲಿ ಅನೇಕ ಒಳ್ಳೆಯ ನಡತೆಗಳು ಇತ್ತು. ಈಗ ಇವರು ಬಿಜೆಪಿ ಸೇರಿದ ಮೇಲೆ ಅವೆಲ್ಲವನ್ನೂ ಮೂಲೆಗೆ ಹಾಕಿ ಬೇರೆ ದಿಕ್ಕಿಗೆ ಹೋಗುತ್ತಿದ್ದಾರೆ.

ಕೆಲವು ಒಳ್ಳೆಯ ಅಭ್ಯಾಸವನ್ನು ಬಿಟ್ಟು ಬಿಟ್ಟಿದ್ದೀರಿ. ಒಳ್ಳೆಯ ಅಭ್ಯಾಸಗಳನ್ನು ಬಿಟ್ಟು ಬೇರೆ ದಿಕ್ಕಗೆ ತಲುಪುತ್ತಿದ್ದಾರೆ. ಆದುದರಿಂದ ನನಗೆ ಅವರ ಬಗ್ಗೆ ಒಳ್ಳೆಯ ಗೌರವವಿದೆ, ಒಳ್ಳೆಯ ವಿಶ್ವಾಸವಿದೆ. ಅದರಲ್ಲಿ ಏನು ಎರಡನೇಯ

ಅಭಿಪ್ರಾಯವಿಲ್ಲ.ಅತ್ಯಂತ ಪ್ರೀತಿಯಿಂದ, ವಿಶ್ವಾಸವಿದಿಂದ ನಮ್ಮ ಅವರ ಸ್ನೇಹವಿದೆ. ಇವರು ಬಿ.ಜೆ.ಪಿ. ಸೇರಿದ ಮೇಲೆ ಅನೇಕ ಒಳ್ಳೆಯ ಕಲ್ಯಾಣ ಕಾರ್ಯಗಳನ್ನು ಬಿಟ್ಟುರುವಂಥಾದ್ದು ಸರಿಯಲ್ಲವೆಂದು ನನಗನ್ನಿಸುತ್ತದೆ.

ಶ್ರೀ ಹೆಚ್.ಎನ್. ನಂಜೇಗೌಡ : ಈಗ ಮಾನ್ಯ ವಾಟಾಳ್‌ನಾಗರಾಜ್‌ರವರು ಹೋಗಿ ಹೋಗಿ ಮಾನ್ಯ ಜೆ.ಹೆಚ್.ಪಟೇಲರ್‌ರವರ ತಲೆಗೆ ತಂದುಬಿಟ್ಟರು. ನೀವು ಏಕೆ ಎಂದು ಕೇಳುತ್ತಿರಾ?

ಈಗ ನನಗೆ ಇರುವ ಒಳ್ಳೆಯ ಅಭ್ಯಾಸವೆಲ್ಲಾ ನಾನು ಬಿ.ಜೆ.ಪಿಯನ್ನು ಸೇರಿ ಬಿಟ್ಟೆ. ಈಗ ಮನೆಯವರು ಎಲ್ಲಾ ಸ್ಟ್ರಕ್‌ಮಾಡುತ್ತಾರೆ. ಜಿಂದಾಲ್‌ಗೆ ಏಕ್ ಹೋಗುತ್ತೀರಿ, ಬಿ.ಜೆ.ಪಿಗೆ ಸೇರಿ ಎಂದು ಅಂಥಾ....

ಶ್ರೀ ವಾಟಾಳ್ ನಾಗರಾಜ್: ಅವರು ಜಿಂಕದಾಲ್‌ಗೆ ಹೋಗಿ ಮೈ ತುಂಬ ಮಣ್ಣು ಹಾಕಿಕೊಂಡು ನಿಂತಿದ್ದರಂತೆ ಯಾರೋ ಹೋದವರು ಏನು ಪಟೇಲರೆ ಹೀಗಿದ್ದೀರಿ ಎಂದು ಕೇಳಿದರಂತೆ, ನಾನು ನಿಜವಾದ ಮಣ್ಣಿನ ಮಗ ಎಂದು ಅವರು ಹೇಳಿದರಂತೆ.

ಶ್ರೀ ಹಚ್.ಎನ್.ನಂಜೇಗೌಡ : ಮಾನ್ಯ ಮಹಿಳಾ ಮಂತ್ರಿಗಳು ತಪ್ಪು ತಿಳಿದುಕೊಳ್ಳುವುದು ಬೇಡ. ಪಾರ್ಲಿಮೆಂಟರಿ ಡಿಬೆಟ್‌ನಲ್ಲಿ ಇದೆಲ್ಲಾ ಬರುತ್ತದೆ. ಅದ್ದರಿಂದ ತಾವು ಯಾರೂ ಸಿಟ್ಟುಮಾಡಿಕೊಳ್ಳುವುದು ಸೂಕ್ತವಲ್ಲ

ವೆಂದು ವಿನಂತಿಸಿಕೊಳ್ಳುವುದಕ್ಕೋಸ್ಕರ ನಾನು ಹೇಳಿದೆ. ನಮ್ಮವರು ಯಾರಾದರೂ ಶಾಮೀಲು ಎನ್ನುವಂತಹ ಪದವನ್ನು ಹೇಳಿದ್ದರೆ ಅದಕ್ಕೆ ನಾನು ವಿಷಾದಪಡುತ್ತೇನೆ. ಅದೆಲ್ಲಾ ಉಪಯೋಗಿಸುವಂತಹ ಭಾಷೆಯಲ್ಲ. ಅವರು ಬ್ಲಾಕ್‌ಮೆಲ್ ಎಂದು ಉಪಯೋಗಿಸಿದರು ಅದಕ್ಕೂ ಸಿಟ್ಟಿಲ್ಲ. ಒಂದು ಏನು ಸಂತೋಷವೆಂದರೆ.....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ ಸದನಕ್ಕೆ ತಪ್ಪುಮಾಹಿತಿಗೆ ಹೋಗಬಾರದು ಮತ್ತು ಬೇರೆ ಸದಸ್ಯರಿಗೆ ತಪ್ಪು ತಿಳುವಳಿಕೆಯಾಗಬಾರದು. ಅವರು ಏನೆಂದರೆ, ನೀವು ಸರ್ಕಾರದ ಜೊತೆಯಲ್ಲಿ ಶಾಮೀಲಾಗಿ ಇದನ್ನು ಮಾಡುತ್ತಾ ಇದ್ದೀರಿ ಎಂದು ಹೇಳಿದಾಗ ನಾನು ಹೇಳಬೇಕಾಯಿತು, ನೀವು ಅನೇಕ ಸಾರಿ ಬ್ಲಾಕ್‌ಮೇಲ್ ಮಾಡಿ ಈ ರೀತಿಯಾಗಿ ಮೂಡುತ್ತಿದ್ದೀರಿ ಎಂದು ಅದಕ್ಕೆ ಈ ಪದವನ್ನು ಅವರ ಉಪಯೋಗ ಮಾಡದಿದ್ದರೆ ನಾನೂ ಕೂಡ ಈ ರೀತಿ ಹೇಳುತ್ತಿರಲಿಲ್ಲ. ಇದರಿಂದ ನಿಮಗೆ ವಿಷಾದವಾದರೆ ನನಗೂ ಕೂಡ ವಿಷಾಯವಿದೆ.

ಶ್ರೀ ಹೆಚ್.ಎನ್. ನಂಜೇಗೌಡ : ಮಾನ್ಯ ಅಧ್ಯಕ್ಷರೆ, ಬರದ ಬಗ್ಗೆ ಚರ್ಚೆಯಾಗಲಿ ಎನ್ನುವಂಥಾದ್ದರಲ್ಲಿ ನಾವು ಏನು ಹಿಂದೆ ಇಲ್ಲ. ಯಾವಾಗ ಬೇಕಾದರೂ ಮಾಡಿ. ಆದರೆ ಒಂದು ವಿಷಯವೇನೆಂದರೆ, ನಾವು ಮುಖ್ಯಮಂತ್ರಿಗಳ ಹತ್ತಿರ ಹೋಗಲೇ ಬೇಕಾಗುತ್ತದೆ. ಏಕೆಂದರೆ, ಅವರು ಈ ರಾಜ್ಯದ ಮುಖ್ಯಮಂತ್ರಿಗಳು, ನಾವು ಅವರನ್ನು ಮುಖ್ಯಮಂತ್ರಿಗಳೆಂದು ಒಪ್ಪಿಕೊಂಡಿದ್ದೆವು. ನಾವು ಹೋಗಿದ್ದೆವು. ಈಗ ಅವರು ಒಪ್ಪಿಕೊಳ್ಳದಿದ್ದರೆ ನಮಗೆ ಏನು ದುಃಖವಿಲ್ಲ. ಅದು ಅವರಿಗೆ ಬಿಟ್ಟಿದ್ದುದು. ಮಾನ್ಯ ದೇವೆಗೌಡರು ಮುಖ್ಯಮಂತ್ರಿಗಳೆಂದು ಒಪ್ಪಿಕೊಳ್ಳುವುದು, ಬಿಡುವುದು ಮಾನ್ಯ ಖರ್ಗೆಯವರಿಗೆ ಮತ್ತು ಮೊಯಿಲಿಯವರಿಗೆ ಸೇರಿದ್ದುದು. ಬರದ ಬಗ್ಗೆ ಚರ್ಚೆ ಮಾಡುವಂಥಾದ್ದಕ್ಕೆ ನಮ್ಮದು ಏನೂ ಅಭ್ಯಂತರವಿಲ್ಲ, ನಾವು ಆತುರವಾಗಿಯೇ ಇದ್ದೇವೆ.

ಮೋನ್ನೆ ನಾವೇ ಮೊದಲನಮಯದಾಗಿ ನೋಟೀಸ್‌ಕಳುಹಿಸಿದ್ದೇವೆ. ನಿನ್ನೆ ನಮ್ಮ ನಾಯಕರಿಗೂ ಒಂದು ಆದೇಶ ಕೊಟ್ಟಿವು. ಈ ಬರಗಾಲ ಗುಲ್ಬರ್ಗಾ ರಾಯಚೂರು, ಬೀದರ್, ಬಿಜಪುರದಲ್ಲಿ ಕಾಣುವುದು. ಇಷ್ಟು ಬರಗಾಲವಿರುವಾಗ ಮಾನ್ಯ ಮುಖ್ಯಮಂತ್ರಿಗಳು ಸಿಂಗಪುರ್, ದುಬೈನಲ್ಲಿ ಬರಗಾಲವನ್ನು ನೋಡುದಕ್ಕೆ ಹೋಗಿದ್ದಾರಲ್ಲಾ, ಇದು ಒಂದು ಕಾರಣ, ಅವರಲ್ಲಿ ಅವಿಶ್ವಾಸವನ್ನು ವ್ಯಕ್ತಪಡಿಸಬೇಕಾದರೆ ಇದು ಒಂದು ಕಾರಣವಾಗಿದೆ. ಇದೆಲ್ಲಾ ಚರ್ಚೆಗೆ ಬಂದಾಗ ಏನೇನು ಕಾರಣವೆನ್ನುವಂಥಾದ್ದನ್ನು ಹೇಳುತ್ತೇವೆ. ಬರ ಎರಡನೆಯದಾಗಿ ಮಾಡಿ ಉಳಿದದ್ದು ತೆಗೆದುಕೊಳ್ಳುತ್ತೇವೆಂದು ಅಲ್ಲ, ಬರಗಾಲದ್ದೇ ನಮಗೆ ಪ್ರಮುಖ್ಯವಾದದ್ದು. ಈ ಅವಿಶ್ವಾಸ ನಿರ್ಣಯವನ್ನು ತರುವಂಥಾದಕ್ಕೆ ಅದು ಪ್ರಮುಖವಾದ ಕಾರಣ. ಆದುದರಿಂದ ತಾವು ನಿಯಮದ ಪ್ರಕಾರ ಮೂರು ದಿವಸಗಳಲ್ಲಿ ಯಾವಾಗಲಾದರೂ ಅವಕಾಶ ಮಾಡಿ ಕೊಡ ಬಹುದು. ಬರಗಾಲದ ಬಗ್ಗೆ ಆದ್ಯತೆಯ ಮೇಲೆ ತೆಗೆದುಕೊಂಡರೆ ನಾವು ಸಂತೋಷಪಡುತ್ತೇನೆ. ಬರಗಾಲದ ಬಗ್ಗೆಯು ನಮಗೆ ಭಾರಿ ಆಸ್ತೆ ಇದೆ ಎನ್ನ ತಕ್ಕಂಥಾದ್ದನ್ನು ತಿಳಿಸುತ್ತೇನೆ.

ಅಧ್ಯಕ್ಷರು : ಸದನವನ್ನು ಅನಿರ್ದಿಷ್ಟ ಕಾಲ ಮುಂದೂಡಿದ ಮೇಲೆಸಂವಿಧಾನಬದ್ಧವಾಗಿ ಸಭೆಯ ಅಧಿವೇಶನವನ್ನು ಕರೆಯಬೇಕಾದರೆ, ಸಚಿವ ಸಂಪುಟದ ಸಭೆಯ ಶಿಫಾರಸ್ಸುಗಳು ರಾಜ್ಯಪಾಲರಿಗೆ ಹೋಗಿ ಅಲ್ಲಿಂದ ಸೂಚನೆ ಬಂದಮೇಲೆ ಸದನವನ್ನು ಕರೆಯುತ್ತೇವೆ. ಸನ್ಮಾನ್ಯ ಸಭಾನಾಯಕರ ಕಛೇರಿಯಲ್ಲಿ ತಾವು ಸೇಗಿದಾಗ ಏನೇನು ಚರ್ಚೆ ಮಾಡಿದಿರಿ. ಆ ಮಾಹಿತಿ ನನ್ನ ಬಳಿ ಇದೆ. ಸಂವಿಧಾನಾತ್ಮಕವಾಗಿ ಸಭೆಯನ್ನು ಕರೆಯಬೇಕಾಗಿತ್ತು, ಕರೆದಿದ್ದೇವೆ. ನಯಮಾವಳಿಗಳ ಪ್ರಕಾರ ನಾವು ಹೋಗುವುದಾದರೆ ಅವಿಶ್ವಾಸ ನಿರ್ಣಯವನ್ನು ಮಂಡಿಸುವುದಕ್ಕು ಈ ಸಭೆ ಅನುಮತಿ ಕೊಟ್ಟಮೇಲೆ ಚರ್ಚೆಗೆ ನಾನು ಸಿದ್ಧನಿದ್ದೇನೆ ಎಂದು ಮಾನ್ಯ ಸಭಾಮಾಯಕರು ತಮ್ಮ ಅಭಿಪ್ರಾಯವನ್ನು ವ್ಯಕ್ತಮಾಡಿದ ಮೇಲೆ ನಿಯಮಾವಳಿಯ ಪ್ರಕಾರ ಮೂರು ದಿವಸಗಳೊಳಗೆ ಸಮಯ ನಿಗದಿ ಮಾಡಬಹುದೆಂದು ಇದ್ದರೂ ಕೂಡ ಮಾನ್ಯ ವೀರಪ್ಪಮೊಯಿಲಿಯವರು ಹಿಂದಿನ ಮುಖ್ಯಮಂತ್ರಿಗಳಾಗಿದ್ದಂತಹ ಸಂದರ್ಭದಲ್ಲಿ ಮಾಡಿರುವಂತಹ ಒಂದು ಪದ್ಧತಿಯನ್ನು ಅನುಸರಿಸುವುದಾದರೆ ಈಗಿನಿಂದಲೇ ತೆಗೆದುಕೊಳ್ಳೋಣ, ನಾನು ತಯಾರಾಗಿದ್ದೇನೆ ಎನ್ನುವಂತಹ ಮಾತನ್ನೇ ಅವರು ಹೇಳಿರು. ಅವಿಶ್ವಾಸ ನಿರ್ಣಯವನ್ನು ಚರ್ಚೆ ಮಾಡುವಂತಹ ಸಂದಭದಲ್ಲಿ ಬರುಗಾಲದ ವಿಚಾರವನ್ನು ಪ್ರಸ್ತಾಪ ಮಾಡಬಾರದೆನ್ನುವಂತಹ ನಿರ್ಭಂಧ ಏನೂ ಇಲ್ಲ. ನೀವು ಕೊಟ್ಟಿರುವಂತಹ ಸೂಚನೆಯ ಪ್ರಾಮುಖ್ಯತೆಯನ್ನು ಅಲ್ಲಗಳೆಯಬೇಕೆನ್ನುವಂತಹ ದೃಷ್ಟಿಯಿಂದ ನಾನು ಹೇಳುತ್ತಾ ಇಲ್ಲ. ಈ ಸದನವನ್ನು ನಡೆಸಿಕೊಂಡು ಹೋಗುವುದಕ್ಕೆ ನಾವೆಲ್ಲರೂ ಸೇರಿ ಹಾಕಿಕೊಂಡಿರುವಂತಹ ನಿಯಮಾವಳಿಗಳಿಗೆ ಗೌರವ ಕೊಡುವಂತಹ ಒಂದು ಜವಬ್ದಾರಿ ನಮ್ಮೆಲ್ಲರ ಮೇಲೆ ಇದೆ. ಆದುದರಿಂದ ಈಗ ಎಷ್ಟು ಹೊತ್ತು ಚರ್ಚೆಗೆ ಕಾಲವನ್ನು ನಿಗದಿ ಮಾಡಬೇಕು, ಎಷ್ಟು ದಿವಸ ಚರ್ಚೆ ಮಾಡಬೇಕು ಎನ್ನುವಂಥಾದ್ದಕ್ಕೆ ಬೇಕಾದರೆ ಹತ್ತು ನಿಮಿಷಗಳು ಸಭೆಯನ್ನು ಮುಂದಕ್ಕೆ ಹಾಕಿ ಮಾತನಾಡಿ ಮತ್ತೆ ನಾವು ಸಭೆ ಸೇರೋಣ. ಒಂದು ವಿಷಯ ಬಿಟ್ಟರೆ ಉಳಿದ ಹಾಗೆ ನನಗೆ ಅನಿಸುವುದು ಈಗ ಉಳಿದಿರುವುದು ಒಂದೇ ಮಾರ್ಗ. ನಿರ್ಣಯವನ್ನು ನೇರ ಚರ್ಚೆಗೆ ತೆಗೆದುಕೊಳ್ಳೋಣ. ಬರಗಾಲದ ಬಗ್ಗೆ ಇನ್ನು ಉಳಿದ ಪ್ರಾಮುಖ್ಯವಾದ ವಿಷಯಗಳು ಯಾವುದಿದೆ ಎಲ್ಲವನ್ನು ಕೂಡ ಪ್ರಸ್ತಾಪ ಮಾಡಬಹುದು.

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಅಧ್ಯಕ್ಷರೆ, ಎರಡು ವಿಷಯಗಳು ನಮ್ಮ ಮುಂದೆ ಇದೆ. ಒಂದು ನಿಯಮಾವಳಿಯ ಪ್ರಕಾರ ಅವಿಶ್ವಾಸ ನಿರ್ಣಯಕ್ಕೆ ಆದ್ಯತೆ ಕೊಡೋಣ ಎನ್ನುವಂತಹ ಆಧಾರದ ಮೇಲೆ ತಾವು ವಿಷಯವನ್ನು ಚರ್ಚೆಗೆ ಮೊದಲೆ

ಅವಿಶ್ವಾಸದ ನಿರ್ಣಯದ ಮೇಲೆ ತೆಗೆದು ಕೊಳ್ಳುವಂತಹ ವಿಚಾರಕ್ಕೆ ಸಭಾನಾಯಕರು ಕೂಡ ತೆಗೆದುಕೊಳ್ಳುವ

ಹಾಗಿದ್ದರೆ ಈಗಲೇ ತೆಗೆದುಕೊಳ್ಳಿ ಎನ್ನುವಂತಹ ಅಭಿಪ್ರಾಯವನ್ನು ಅವರು ಹೇಳಿದರು ಎಂದು ಕಾಣುತ್ತದೆ. ಅದು ನಿಮಗೆ ಬಿಟ್ಟಿರತಕ್ಕದ್ದು, ತಾವು ಆದ್ಯತೆ ಕೊಟ್ಟು ಚರ್ಚೆಗೆ ಅವಕಾಶ ಮಾಡಿಕೊಡುವುದಕ್ಕೆ ಸಾಧ್ಯತೆ ಕೂಡ ಇದೆ. ನಾವು ಇಲ್ಲವೆಂದು ಹೇಳುವುದಿಲ್ಲ. ಇನ್ನು ಬರಗಾಲ ಪರಿಸ್ಥಿತಿಯ ಬಗ್ಗೆ ಅದು ಕೂಡ ಪ್ರಾಮುಖ್ಯವಾದಂತಹ ವಿಷಯ ಎಂಬ ಮಾತಿನ ಬಗ್ಗೆ ಕೂಡ ಬೇರೊಂದು ಅಭಿಪ್ರಾಯ ಈ ಸದನದಲ್ಲಿ ಯಾವ ಮೂಲೆಯಿಂದ ಕೂಡ ಬಂದಿಲ್ಲ. ಆದರೆ ತಾವು ಹೇಳಿದ್ದೀರಿ, ಅವಿಶ್ವಾಸ ನಿರ್ಣಯವನ್ನು ಚರ್ಚೆಗೆ ಎತ್ತಿ ಕೊಂಡಮೇಲೆ ಬರದ ವಿಚಾರವನ್ನು ಕೂಡ ನಾವು ಪ್ರಸ್ತಾಪ ಮಾಡಬಹುದು ಎಂದು. ಆದರೆ ಅದು ಅಷ್ಟೊಂದು ಒಳ್ಳೆಯದಾಗಲಾರದು. ತಾವು ಕ್ಷಮಿಸಬೇಕು ನಾನು ತಮ್ಮ ಅಭಿಪ್ರಾಯವನ್ನು ಇಟ್ಟುಕೊಂಡಿದ್ದೇನೆ. ಆ ಅಭಿಪ್ರಾಯವನ್ನು ನಾನು ಒಪ್ಪುತ್ತಿಲ್ಲ. ಬರಗಾಲದ ಪರಿಸ್ಥಿತಿಯನ್ನು ನಾವು ಚರ್ಚೆಗೆ ತೆಗೆದುಕೊಂಡರೆ ಅದರ ಬಗ್ಗೆ ಬಹಳ ವಿವರವಾಗಿ ಹೋಗಬೇಕಾಗುತ್ತದೆ. ಅವಿಶ್ವಾಸ ನಿರ್ಣಯವನ್ನು ಚರ್ಚೆಗೆ ತೆಗೆದುಕೊಂಡಾಗ ಚರ್ಚೆಯಲ್ಲಿ ನಾವು ಭಾಗವಹಿಸಿದಾಗ ಬರಗಾಲದ ವಿಷಯವನ್ನು ಕೂಡ ನಾವು ಪ್ರಸ್ತಾಪ ಮಾಡಬಹುದು. ಆದಕ್ಕೆ ಪ್ರತಿಬಂಧಕವೇನೂ ಇಲ್ಲ. ಅವಿಶ್ವಾಸ ನಿರ್ಣಯವೆಂದರೆ ಎಲ್ಲಾ ವಿಷಯಗಳನ್ನು ಚರ್ಚೆಯಾಗಿ ಹೋಗಿದೆ, ಅದರ ಮೇಲೆ ನಾವು ಪ್ರತ್ಯೇಕವಾಗಿ ಚರ್ಚೆಗೆ ಅವಕಾಶ ಕೊಡುವುದಕ್ಕೆ ಏನು ಉಳಿದಿದೆ, ಅದನ್ನು ತಾವು ಭಾಷಣ ಮಾಡಿ ಬಿಟ್ಟಿದ್ದೀರಿ ಎನ್ನುವಂತಹ ಅಭಿಪ್ರಾಯ ನಾಳೆ ಈ ಸದನದಲ್ಲಿ ಬೇರೆ ಸದಸ್ಯರು ಪ್ರಸ್ತಾಪ ಮಾಡಬಹುದು. ಆಗ ಅದು ತಮಗೆ ಇಕ್ಕಟ್ಟಿನ ಪ್ರಸಂಗ ಬರಬಹುದೆಂದು ನನ್ನ ಅಭಿಪ್ರಾಯ. ಪ್ರಸ್ತಾಪ ಮಾಡತಕ್ಕಂಥವರು ಭಾಷಣ ಮಾಡಬೇಕಾದರೆ ನೀವು ಏಕೆ ಭಾಷಣ ಮಾಡುತ್ತೀರಿ, ಎಂದು ನಾವು ಬಾಯಿ ಮುಚ್ಚುವುದಕ್ಕೆ ಯಾರಿಗೂ ಹಕ್ಕು ಇರುವುದಿಲ್ಲ. ಆದುದರಿಂದ ನಾನು ಈ ಸದನದಲ್ಲಿ ಏನು ಹೇಳುತ್ತೇನೆಂದರೆ, ಪ್ರತ್ಯೇಕವಾಗಿ ಬರಗಾಲದ ಬಗ್ಗೆ ಚರ್ಚೆಗೆ ತೆಗೆದುಕೊಳ್ಳುವಂತಹ ಅವಶ್ಯಕತೆ ಇಲ್ಲಿ ಇದೆ. ತಾವು ಅದನ್ನು ಇಲ್ಲವೆಂದು ಹೇಳಿಲ್ಲ. ಈ ದೃಷ್ಟಿಯಿಂದ ಬರಗಾಲದ ವಿಷಯವನ್ನು ಪ್ರತ್ಯೇಕವಾಗಿ ಚರ್ಚೆಗೆ ಇಟ್ಟುಕ್ಕೊಳ್ಳುವಂತಹ ಅವಶ್ಯಕತೆ ಬಹಳವಿದೆ. ಈ ಸದನದ ಎಲ್ಲಾ ಆಳುವ ಪಕ್ಷ, ವಿರೋಧ ಪಕ್ಷ, ಅದು ಯಾರೆ ಆದರೂ ಕೂಡ ಭಾಗವಹಿಸ ಅದರ ಬಗ್ಗೆ ಅಮೂಲಾಗ್ರವಾದಂತಹ ಚರ್ಚೆಗೆ ಆ ವಿಷಯವನ್ನು ಒಳಪಡಿಸಿ ಹಚ್ಚಿನ ಬೆಳಕನ್ನು ಚೆಲ್ಲುವಂತಹ ಒಂದು ಸದವಕಾಶವನ್ನು ಮಾನ್ಯ ಸದಸ್ಯರು ಯಾರು ಕೂಡ ಕಳೆದುಕೊಳ್ಳಬಾರದು. ತಾವು ಸಹ ಅದಕ್ಕೆ ಅನುಮತಿಯನ್ನು ಕೊಟ್ಟೇ ಕೊಡುತ್ತೀರಿ. ಬರಗಾಲದ ಬಗ್ಗೆ ಚರ್ಚೆಗೆ ತೆಗೆದುಕೊಳ್ಳುವಂತಹ ಅವಶ್ಯಕತೆ ಇದೆ. ಮಾನ್ಯ ಸದಸ್ಯರುಗಳು ಭಾಷಣ ಮಾಡುವಂತಹ ಸಂದರ್ಭದಲ್ಲಿ ತಮ್ಮ ಹಕ್ಕನ್ನು ಪ್ರತ್ಯೇಕವಾಗಿ ಇಟ್ಟುಕೊಳ್ಳಬಹುದು. ಇನ್ನು ಅವಿಶ್ವಾಸ ನಿರ್ಣಯವನ್ನು ಚರ್ಚೆಗೆ ಯಾವಾಗ ತೆಗೆದುಕೊಳ್ಳಬೇಕು ಎಂಬ ಪ್ರಶ್ನೇ ಕೂಡ ಅಷ್ಟೇ ಮುಖ್ಯ. ಮಾನ್ಯ ಸದಸ್ಯರಾದ ನಂಜೇಗೌಡರು ಕೂಡ ಅದನ್ನು ಹೇಳಿದ್ದಾರೆ. ಮಾನ್ಯ ಸಭಾನಾಯಕರು ಕೂಡ ಚರ್ಚೆಗೆ ತೆಗೆದುಕೊಳ್ಳಬಹುದೆಂದು ತಮ್ಮ ಒಪ್ಪಿಗೆಯನ್ನು ಕೊಟ್ಟಿದ್ದಾರೆ. ಈಗ ವಿರೋಧಪಕ್ಷದ ನಾಯಕರು ಕೂಡ ಅದನ್ನು ಚರ್ಚೆಗೆ ತೆಗೆದುಕೊಳ್ಳಿ ಎಂದು ಹೇಳುತ್ತಿದ್ದಾರೆ. ತಾವು ಸದನದ ಸಮಿತಿಗಳ ವರದಿಯನ್ನೂ ಕೂಡ ಮಂಡಿಸಲಿಕ್ಕೆ.

ಅದು ಬಿಟ್ಟು ಅದಕ್ಕೆ ಅವಕಾಶಗಳು ಇಲ್ಲದ ಹಾಗೆ... ಏಕೆಂದರೆ ನಮ್ಮ ನಿಯಮಗಳು ಆ ರೀತಿ ಹೇಳುತ್ತವೆ ಎಂಬ ಒಂದು ಕಾರಣದ ಮೇಲೆ ಈಗಾಗಲೇ ಅದರ ಪ್ರಸ್ತಾರದ್ದೆ ಅವಕಾಶ ಮಾಡಿ ಕೊಟ್ಟಿದ್ದೀರಿ. ಈಗ ಆದ್ಯತೆ ಯಾವುದಕ್ಕೆ ಎಂಬ ಪ್ರಶ್ನೆಯ ಬಗ್ಗೆ ತಾವು ತೀರ್ಮಾನವನ್ನು ಮಾಡಬೇಕು. ಆ ಸದಸನದಲ್ಲಿ

ಯಾರದರೂ ಕೂಡ ಏನೂ ತಕರಾರು ಬರುವುದಿಲ್ಲ. ಯಾರು ಮಾತನಾಡಿದರೂ ಕೂಡ ಅಷ್ಟೇ ವಿಷಯ. ಅವಿಶ್ವಾಸ ನಿರ್ಣಯಕ್ಕೆ ಅವರೂ ಒಪ್ಪಿಗೆ ಕೊಟ್ಟಿದ್ದಾರೆ ಬೇಕಾದರೆ ಈಗಲೇ ಅದನ್ನು ತೆಗೆದುಕೊಂಡು ಬಿಡಬಹುದು. ಅಮೇಲೆ ಅಷ್ಟೇ ಪ್ರಾಮುಖ್ಯತೆ ಇರತಕ್ಕಂತದ್ದು ಈ ಬರಗಾಲದ ವಿಚಾರ ಇದರ ಮೇಲೆ ಯಾವುದು ಎಂಬುದನ್ನು ನೋಡಬೇಕಾಗುತ್ತದೆ. ಏಕಂದರೆ ನಾಲ್ಕು ಗಂಟೆಗೆ ಸದನದ ಬಿಸಿನೆಸ್ ಅಡ್ವೈಸರಿ ಕಮಿಟಿಯ ಸಭೆಯನ್ನು ಕರೆದಿದ್ದೀರಿ. ಆದರೆ ನಾಲ್ಕು ಗಂಟೆಗೆ ಇನ್ನೂ ಎರಡು ಗಂಟೆ ನಮಗೆ ಕಾಲವಕಾಶ ಇರುವುದರಿಂದ ಆ ಕಾಲವನ್ನು ನಾವು ವ್ಯಯ ಮಾಡುವುದು ಬೇಡ.

ಅಧ್ಯಕ್ಷರು : ತಾವು ತಡವಾಗಿ ಬಂದಿರಿ, ನಾನು ಮತ್ತು ವಾಟಾಳ್‌ರು ಬಹು ಬೇಗ ಬಂದಿದ್ದೇವೆ., ನಮಗೆ ಹಸಿವಾಗುತ್ತಿದೆ.....

ಶ್ರೀ ಎಸ್. ಬಂಗಾರಪ್ಪ : ಅಲ್ಲ ತಾವೇನೋ ಸ್ವಲ್ಪ ಮುಂಚೆ ಬರಬೇಕು, ವಾಟಾಳರು ಅಷ್ಟು ಮುಂಚತವಾಗಿ ಏಕೆ ಬಂದಿದ್ದರು ಎಂಬುದು ನನಗೆ ಅರ್ಥವಾಗುತ್ತಿಲ್ಲ.

ಶ್ರೀ ವಾಟಾಳ್‌ನಾಗರಾಜ್ : ಇದು ಸರಿಯಲ್ಲ, ಈಗ ನೀವ್ಯಾಕೆ ತಡವಾಗಿ ಬಂದಿರಿ ಎಂದು ಅಗಲೇ ನಾನು ತಮ್ಮನ್ನು ಕೇಳಿದೆ. ನಾವು ಮುಂದೆ ಬಂದಿರುವುದರಿಂದ ನಾನು ತಡವಾಗಿ ಬಂದೆ ಎಂದು ಹೇಳಿದಿರಿ.

ಶ್ರೀ ಎಸ್. ಬಂಗಾರಪ್ಪ : ಆದ್ದರಿಂದ ನಾನು ಹೇಳುವುದು ಇಷ್ಟೆ. ಹಸಿವು ಹುಟ್ಟುವುದು ಸಹಜ ಆದರೆ ತಾವು ಈ ಬಗ್ಗೆ ಈಗಲೇ ಒಂದು ತೀರ್ಮಾನವನ್ನು ಮಾಡಿಬಿಡಬಹುದು. ಏತಕ್ಕಾಗಿ ಬಿಸಿನೆಸ್ ಅಡ್ವೈಸರಿ ಕಮಿಟಿ ಸಭೆ ಮತ್ತೆ ಚರ್ಚೆ ಮಾಡಿ.ಒಂದು ದಿವಸ ನಾವು ಈ ಕಲಾಪವನ್ನು ಮುಂದಕ್ಕೆ ಹಾಕುವಂಥ ಅವಶ್ಯಕತೆ ನನಗೇನು ಕಾಣಿಸುವುದಿಲ್ಲ. ಈಗ ಅವರು ಒಪ್ಪಿಗೆ ಕೊಟ್ಟಿರುವ ಬಗ್ಗೆ ಚರ್ಚೆಯೋ ಅಥವಾ ಬರಗಾಲದ ಚರ್ಚೆಯೋ ಅವರೆಡರ ಪೈಕಿ ಒಂದನ್ನು ತೆಗೆದುಕೊಳ್ಳಬಹುದು. ಇಲ್ಲ, ಅಲ್ಲಿ ವರದಿಯನ್ನು ಮಂಡನೆ ಮಾಡುವುದಕ್ಕೆ ಬಿಡದೆಯೆ ನೀವು ಅದನ್ನು ತೆಗೆದುಕೊಂಡಮೇಲೆ ಇನ್ನೇನು ಉಳಿಯುತ್ತದೆ. ನಿಯಮಾವಳಿ ಆ ರೀತಿ ಹೇಳಿದ ಮೇಲೆ ತಾವು ಚರ್ಚೆಗೆ ತೆಗೆದುಕೊಳ್ಳಬಹುದು. ಇಷ್ಟು ಹೇಳಿ ನಾನು ತಮಗೆ ವಂದನೆಯನ್ನು ಸಲ್ಲಿಸುತ್ತೇನೆ.

ಶ್ರೀ ವೈ. ರಾಮಕೃಷ್ಣ : ಈ ವಿಚಾರದಲ್ಲಿ ಮಹತ್ತರವಾದಂಥ ವಿಚಾರಗಳನ್ನು ವಿವಿಧ ಪಕ್ಷದ ನಾಯಕರುಗಳು ತಮ್ಮ ಮುಂದಿಟ್ಟಿದ್ದಾರೆ. ಬರಗಾಲದ ಪರಿಸ್ಥಿತಿ ಅವಿಶ್ವಾಸ ನಿರ್ಣಯ ಕ್ಕಿಂತ ಮುಂಚೆ ಚರ್ಚೆಯಾಗಬೇಕು. ಇದಕ್ಕೆ ಕಾರಣ ಇದೆ. ಏನು ಕಾರಣ ಇದೆ ಎಂದು ಹೇಳಿದರೆ ಇದು ಪಕ್ಷಾತೀತವಾಗಿ ಚರ್ಚೆಯಾಗಬೇಕಾದಂಥ ವಿಚಾರ. ರಾಜ್ಯಕ್ಕೆ ಒಳ್ಳೆಯದು ಆಗಬೇಕಾದಂಥ ವಿಚಾರ ಬರಪರಿಹಾರ ನಿಧಿಗೆ ಕೇಂದ್ರಸರ್ಕಾರಿದಿಂದ ಹೆಚ್ಚಿಗೆ ಹಣ ತರಬೇಕಾದಂಥ ವಿಚಾರ. ಈ ವಿಚಾರದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಪ್ರಧಾನಮಂತ್ರಿಗಳನ್ನು ನೋಡಿದ್ದಾರೆ, ನಮ್ಮ ಪಕ್ಷದವರು ಸಹ ಪ್ರಧಾನಮಂತ್ರಿಗಳನ್ನು ನೋಡಿ ಹಣ ಕೇಳಿದೆವು. ಅವಿಶ್ವಾಸ ನಿರ್ಣಯದಲ್ಲಿ ಈ ಬರಗಾಲದ ಪರಿಸ್ಥಿಯನ್ನು ತೆಗೆದುಕೊಂಡು ಚರ್ಚೆ ಮಾಡಿದರೆ ಅಷ್ಟು ಮಹತ್ವ ದೊರಯಲಾರದು ಅದಕ್ಕೋಸ್ಕರ ವಿಶೇಷವಾಗಿ ನಾವು ಬರಗಾಲದ ಪ್ರದೇಶಗಳ ವಿಚಾರದಲ್ಲಿ ಚರ್ಚೆ ನಡೆಸಿ ನಮ್ಮ ಅನಿಸಿಕೆಗಳನ್ನು ಹೇಳಿ ಹೆಚ್ಚಿಗೆ ಹಣ ಪಡೆಯುವುದಕ್ಕೋಸ್ಕರವಾಗಿ ಅದಕ್ಕೆ ಆದ್ಯತೆಯನ್ನು ಕೊಟ್ಟರೆ ಒಳ್ಳೆಯದು ಎಂದು ಹೇಳಿ ನಮಾನು ತಮ್ಮನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

(ಗೊಂದಲ)

ಶ್ರೀ ವೈ. ರಾಮಕೃಷ್ಣ : ಅದು ಆಮೇಲೆ ಬೇಕು. ಏಕೆ ಬೇಡ ? ನಾನು ಹೇಳಿದುದ್ದು we are here to strengthen the hands of the State Government to get more funds from the Centre. ಅದನ್ನು ನೀವು ಅರ್ಥ ಮಾಡಿಕೊಳ್ಳಿ.

ಶ್ರೀ ಡಿ.ಕೆ. ಶಿವಕುಮಾರ್ : ಈಗೇನು ಅವಿಶ್ವಾಸ ನಿರ್ಣಯ ಮಂಡಿಸಿದ್ದಾರೆ ಅಂದು ಬಿದ್ದು ಹೋಗುತ್ತದೆ ಎಂದು ಹೇಳಿ ಅವರು ಅಗಲೇ ಒಪ್ಪಿಕೆಂಡಿದ್ದಾರೆ.

ಅಧ್ಯಕ್ಷರು :ಸಭೆಯನ್ನು ಒಂದು ಗಂಟೆ ಕಾಲ ಮುಂದೂಡಲಾಗಿದೆ.

(ಸಭೆಯನ್ನು 2.15 ಕ್ಕೆ ಮುಂದೂಡಲಾಯಿತು)

(ಸಭೆಯ ಪುನಃ 4-40 ನಿಮಿಷಕ್ಕೆ ಪ್ರಾರಂಭವಾಯಿತು ಮಾನ್ಯ ಅಧ್ಯಕ್ಷರು ತಮ್ಮ ಪೀಠವನ್ನು ಅಲಂಕರಿಸಿದರು)

ಅಧ್ಯಕ್ಷರು : ವಿಷಯ ಸಮಿತಿ ವರದಿಗಳನ್ನು ಮೇಲ್ಮನೆಯಲ್ಲಿ ಈಗಾಗಲೇ ಮಂಡಿಸಿದ್ದಾರೆ. ಅದ್ದರಿಂದ ಇಲ್ಲಿ ಮಂಡಿಸದಿದ್ದರೆ ಅದು ಸಂದ್ಗಿದತೆ ಆಗುತ್ತದೆ. ಆದ್ದರಿಂದ ವಿಷಯ ಸಮಿತಿ ವರದಿಗಳನ್ನು ಮಂಡಿಸಿದ ಮೇಲೆ ಅವಿಶ್ವಾಸ ನಿರ್ಣಯವನ್ನು ತೆಗೆದುಕೊಳ್ಳೋಣ.

5. ವಿಷಯ ಸಮಿತಿಗಳ ವರದಿಗಳನ್ನೊಪ್ಪಿಸುವುದು

1. ಶ್ರೀ ಯು.ಆರ್. ಸಭಾಪತಿ (ಅಧ್ಯಕ್ಷರು, ಕೃಷಿ, ತೋಟಗಾರಿಕೆ,ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖಾ ವಿಷಯ) ಮಾನ್ಯ ಅಧ್ಯಕ್ಷರೆ, ಕೃಷಿ, ತೋಟಗಾರಿಕೆ, ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆಗಳ 1995-96ನೇ ಸಾಲಿನ ಅನುದಾನ ಬೇಡಿಕೆಗಳ ಮೇಲಿನ ಪ್ರಥಮ ವರದಿಯನ್ನೊಪ್ಪಿಸುತ್ತೇನೆ.
2. ಶ್ರೀ ಜಿ.ಬಿ. ಶಿವಕುಮಾರ್ (ಅಧ್ಯಕ್ಷರು, ಇಂಧನ ಇಲಾಖಾ ವಿಷಯ ಸಮಿತಿ) ಮಾನ್ಯ ಅಧ್ಯಕ್ಷರೆ. ಇಂಧನ, ಇಲಾಖೆಯ 1995-96ನೇ ಸಾಲಿನ ಅನುದಾನ ಬೇಡಿಕೆಗಳ ಮೇಲಿನ ಪ್ರಥಮ ವರದಿಯನ್ನೊಪ್ಪಿಸುತ್ತೇನೆ.
3. ಶ್ರೀ ವೈ. ರಾಮಕೃಷ್ಣ (ಅಧ್ಯಕ್ಷರು, ಹಣಕಾಸು, ಸಾಂಸ್ಥಿಕ ಹಣಕಾಸು ಮತ್ತು ಯೋಜನಾ ಇಲಾಖಾ ವಿಷಯ ಸಮಿತಿ) : ಮಾನ್ಯ ಅದ್ಯಕ್ಷರೆ ಹಣಕಾಸು ಸಾಂಸ್ಥಿಕ ಹಣಕಾಸು ಯೋಜನಾ ಇಲಾಖೆಯ 1995-96ನೇ ಸಾಲಿನ ಅನುದಾನ ಬೇಡಿಕೆಗಳ ಮೇಲಿನ ಪ್ರಥಮ ವರದಿಯನ್ನೊಪ್ಪಿಸುತ್ತೇನೆ.
4. ಶ್ರೀ ಧರ್ಮಸಿಂಗ್ (ಅಧ್ಯಕ್ಷರು,ವಸತಿ ಮತ್ತು ನಗರಾಭಿವೃದ್ಧಿ ಇಲಾಖಾ ವಿಷಯ ಸಮಿತಿ) : ಮಾನ್ಯ ಅಧ್ಯಕ್ಷರೆ, ವಸತಿ ಮತ್ತು ನಗರಾಭಿವೃದ್ಧಿ ಇಲಾಖೆಯ 1995-96ನೇ ಸಾಲಿನ ಅನುದಾನ ಬೇಡಿಕೆಗ ಮೇಲಿನ ಪ್ರಥಮ ವರದಿಯನ್ನೊಪ್ಪಿಸುತ್ತೇನೆ.
5. ಶ್ರೀ ವಾಟಾಳ್ ನಾಗರಾಜ್ (ಅಧ್ಯಕ್ಷರು, ವಾರ್ತಾ, ಪ್ರವಾಸೋದ್ಯಮ, ಮತ್ತು ಯುವಜನ ಸೇವಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖಾ ವಿಷಯ ಸಮಿತಿ) : ಮಾನ್ಯ ಅಧ್ಯಕ್ಷರೆ. ವಾರ್ತಾ, ಪ್ರವಾಸೋಧ್ಯಮ ಮತ್ತು ಯುವಜನ ಸೇವಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗ 1995-96ನೇ ಸಾಲಿನ ಅನುದಾನ ಬೇಡಿಕೆಗಳ ಮೇಲಿನ ಪ್ರಥಮ ವರದಿಯನ್ನೊಪ್ಪಿಸುತ್ತೇನೆ.
6. ಶ್ರೀ ಸಿ.ಎಂ. ಉದಾಸಿ (ಅಧ್ಯಕ್ಷರು, ಸಹಕಾರ ಇಲಾಖಾ ವಿಷಯ ಸಮಿತಿ) ಮಾನ್ಯ ಅಧ್ಯಕ್ಷರೆ, ಸಹಕಾರ ಇಲಾಖೆಯ 1995-96ನೇ ಸಾಲಿನ ಅನುದಾನ ಬೇಡಿಕೆಗಳ ಮೇಲಿನ ಪ್ರಥಮ ವರದಿಯನ್ನೋಪ್ಪಿಸುತ್ತೇನೆ.

(ಅವರ ಪರವಾಗಿ ಶ್ರೀ H.N. ನಂಜೇಗೌಡ ಅವರು): ಮಾನ್ಯ ಅಧ್ಯಕ್ಷರೆ,